# ಬೆಳಗಾವಿ ವಾರ್ತೆ

ಕನ್ನಡ ದಿನ ಪತ್ರಿಕೆ, ಬೆಳಗಾವಿ

ಸಂಪಾದಕರು: ಮಹೇಶ್ವರಿ ಭೀಮಶಿ ಭರಮಣ್ಣವರ
EDITOR: MAHESHWARI BHIMASHI BHARAMANNAVARA

BELAGAVI VARTE
KANNADA DAILY MORNING BELAGAVI

G-mail: belagavivarte1@gmail.com
epaper. belagavivarte.com

Volume: 01 | Issue : 37 | MONDAY 13-04-2026 | PRGI No : KNKAN/26/A0962 | Pages:4 | Rs.2.00 | M: 9742418836


## ಉಪಚುನಾವಣೆ ಗೆಲ್ಲುವ ಉಮೇದು: ಪ್ರಚಾರದಲ್ಲಿ ಸಿಎಂ– ಡಿಸಿಎಂ ನಿರತ; ನಿಯಂತ್ರಣ ಕಳೆದುಕೊಂಡ ಆಡಳಿತ ಯಂತ್ರ!





ಬೆಂಗಳೂರು: ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಹಾಗೂ ಕೇರಳ, ಅಸ್ಸಾಂ– ತಮಿಳುನಾಡಿನಲ್ಲಿ ಚುನಾವಣೆ ಪ್ರಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ನಿರತರಾಗಿದ್ದರಿಂದ ಕಳೆದ ಕೆಲವು ವಾರಗಳಿಂದ ದೈನಂದಿನ ಆಡಳಿತ ಕಾರ್ಯಗಳು ನಿಧಾನಗೊಂಡಿವೆ.

ಏಪ್ರಿಲ್ 26 ರಂದು ಕೊನೆಗೊಂಡ ಬಜೆಟ್ ಅಧಿವೇಶನದ ನಂತರ ಯಾವುದೇ ಪ್ರಮುಖ ಸಭೆಗಳು ನಡೆದಿಲ್ಲ. ಕಾಂಗ್ರೆಸ್ ನಾಯಕರು ಮಾದರಿ ನೀತಿ ಸಂಹಿತೆಯನ್ನು ಉಲ್ಲೇಖಿಸಿದರೂ, ಬಜೆಟ್ ನಂತರದ ಪರಿಶೀಲನಾ ಸಭೆಗಳನ್ನು ಸಾಮಾನ್ಯವಾಗಿ ಒಂದು ತಿಂಗಳೊಳಗೆ ನಡೆಸಲಾಗುತ್ತದೆ, ಆದರೆ ಈ ವರ್ಷ ಯಾವುದೂ ನಡೆದಿಲ್ಲ.

ಕರ್ನಾಟಕವು ಸದ್ಯ ಕುಡಿಯುವ ನೀರಿನ ಕೊರತೆ, ಮಳೆಯಿಂದಾಗಿ ಬೆಳೆ ನಷ್ಟ ಮತ್ತು ಇ–ಸ್ವತ್ತು ಸರ್ವರ್ ಸಮಸ್ಯೆಗಳಂತಹ ಸಮಸ್ಯೆಗಳನ್ನು ಎದುರಿಸುತ್ತಿದೆ. ಸಿಎಂ, ಡಿಸಿಎಂ ಅಥವಾ ಸಚಿವರು ಯಾವುದೇ ಸಭೆಗಳನ್ನು ಕರೆದಿಲ್ಲದ ಕಾರಣ, ಸರ್ಕಾರ ನಿಯಂತ್ರಣ ಕಳೆದುಕೊಂಡಿದೆ ಎಂದು ವಿರೋಧ ಪಕ್ಷಗಳು ಆರೋಪಿಸುತ್ತಿವೆ.

ಮಾರ್ಚ್ 30 ರಿಂದ ಕಳೆದ 12 ದಿನಗಳಲ್ಲಿ, ಸಿಎಂ ಬಾಗಲಕೋಟೆಯಲ್ಲಿ ಆರು ದಿನಗಳು, ದಾವಣಗೆರೆಯಲ್ಲಿ ನಾಲ್ಕು ದಿನಗಳು ಪ್ರಚಾರ ಮಾಡಿದ್ದಾರೆ. ಈ ನಡುವೆ, ಅವರು ಯುಡಿಎಫ್ ಪರ ಪ್ರಚಾರ ಮಾಡಲು ಕಾಸರಗೋಡಿಗೆ ಭೇಟಿ ನೀಡಿದ್ದಾರೆ. ಏಪ್ರಿಲ್ 8 ಮತ್ತು 9 ರಂದು ಅವರು ಬೆಂಗಳೂರಿನಲ್ಲಿದ್ದರೂ ಯಾವುದೇ ಸಭೆಗಳನ್ನು ಕರೆಯಲಿಲ್ಲ. ಶುಕ್ರವಾರ ಸಿದ್ದರಾಮಯ್ಯ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಗವಹಿಸಲು ನವದೆಹಲಿಗೆ ತೆರಳಿದ್ದರು

ಅದೇ ಅವಧಿಯಲ್ಲಿ, ಶಿವಕುಮಾರ್ ಅಸ್ಸಾಂ, ಕೇರಳ ಮತ್ತು ತಮಿಳುನಾಡಿನಲ್ಲಿದ್ದರು. ಅವರು ನಾಲ್ಕು ದಿನಗಳನ್ನು ದಾವಣಗೆರೆಯಲ್ಲಿ ಮತ್ತು ಎರಡು ದಿನಗಳನ್ನು ಬಾಗಲಕೋಟೆಯಲ್ಲಿ ಕಳೆದಿದ್ದಾರೆ. 20 ಕ್ಕೂ ಹೆಚ್ಚು ಸಚಿವರನ್ನು ಪ್ರಚಾರಕ್ಕೆ ಆಹ್ವಾನಿಸಲಾಗಿದೆ ಮತ್ತು ಸಿಎಂ ಮತ್ತು ಡಿಸಿಎಂ ಕೂಡ ಅಲ್ಲಿದ್ದರು ಎಂದು ಹಿರಿಯ ಕಾಂಗ್ರೆಸ್ ನಾಯಕರೊಬ್ಬರು ಹೇಳಿದರು.

ಬಜೆಟ್ ಅನುಷ್ಠಾನ ಸಭೆಗಳು ಸಾಮಾನ್ಯವಾಗಿ ಏಪ್ರಿಲ್‌ನಲ್ಲಿ ಪ್ರಾರಂಭವಾಗುತ್ತವೆ ಆದರೆ ಇಲ್ಲಿಯವರೆಗೆ ಯಾವುದೇ ಸಭೆಯನ್ನು ಕರೆಯಲಾಗಿಲ್ಲ. ಸರ್ಕಾರ ಆಡಳಿತವನ್ನು ನಿರ್ಲಕ್ಷಿಸಿದೆ ಎಂದು ಬಿಜೆಪಿ ರಾಜ್ಯ ಅಧ್ಯಕ್ಷ ಬಿ.ವೈ. ವಿಜಯೇಂದ್ರ ದಿ ನ್ಯೂ ಇಂಡಿಯನ್ ಎಕ್ಸ್ ಪ್ರೆಸ್ ಗೆ ತಿಳಿಸಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ನೀರಿನ ಕೊರತೆ ಇದೆ ಮತ್ತು ಜಾನುವಾರುಗಳಿಗೆ ಮೇವು ಇಲ್ಲ. ನಾಯಕರೇ ತಲೆಕೆಡಿಸಿಕೊಳ್ಳದಿದ್ದಾಗ ಅಧಿಕಾರಿಗಳು ಏಕೆ ಕೆಲಸ ಮಾಡುತ್ತಾರೆ? ಎಂದು ಪ್ರಶ್ನಿಸಿದರು.

## ದಾವಣಗೆರೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ: ಸಿಎಂ ರಾಜಕೀಯ ಕಾರ್ಯದರ್ಶಿ ನಸೀರ್ ತಲೆದಂಡ, ಜಮೀರ್ ಸಚಿವ ಸ್ಥಾನಕ್ಕೂ ಕುತ್ತು?





ಬೆಂಗಳೂರು: ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆ ಕಾಂಗ್ರೆಸ್ ಟಿಕೆಟ್ ಮುಸ್ಲಿಮರಿಗೆ ಕೊಡದಕ್ಕೆ ಶುರುವಾದ ಬಂಡಾಯ ಗೊಂದಲ ನಡುವೆ ಮತದಾನ ಮುಗಿದಿದೆ. ಆದರೆ ಪಕ್ಷದಲ್ಲಿ ಈಗ ಮುಸ್ಲಿಂ ನಾಯಕರ ನಡುವಿನ ಮುಸುಕಿನ ಗುದ್ದಾಟ ಜೋ ರಾಗಿದೆ. ಪಕ್ಷದ ಅಭ್ಯರ್ಥಿ ಸಮರ್ಥ್ ಶಾಮನೂರು ಪರ ಪ್ರಚಾರ ಮಾಡದ ಸಚಿವ ಜಮೀರ್ ಅಹ್ಮದ್ ವಿರುದ್ಧ ಮತ್ತೊಂದು ಮುಸ್ಲಿಂ ಬಣ ತಿರುಗಿ ಬಿದ್ದಿತ್ತು.

ದಾವಣಗೆರೆ ಚುನಾವಣೆ ಪ್ರಚಾರದ ವೇಳೆ ನಡೆದ ಹಗ್ಗಜಗ್ಗಾಟ ಆಂತರಿಕ ವರದಿ ಕಾಂಗ್ರೆಸ್ ಹೈಕಮಾಂಡ್ ಕೈಸೇರಿದೆ. ಎಐಸಿಸಿ ಉಸ್ತುವಾರಿ ಕಾರ್ಯದರ್ಶಿ ಅಭಿಷೇಕ್ ದತ್ ನೀಡಿದ ವರದಿಯಲ್ಲಿ ಉಪಚುನಾವಣಾ ಸಂದರ್ಭದಲ್ಲಿ ಪಕ್ಷದ ಆಂತರಿಕ ಬೆಳವಣಿಗೆಗಳು ಮತ್ತು ನಾಯಕರ ನಡುವಿನ ಮುನಿಸು ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿಗೆ ಅಡ್ಡಿಯಾಗಬಹುದು ಎಂಬ ಆತಂಕ ವ್ಯಕ್ತಪಡಿಸಿದೆ. ಜಮೀರ್ ಅಹ್ಮದ್ ಪಕ್ಷದ ಅಭ್ಯರ್ಥಿ ಪರ ಪ್ರಚಾರ ಮಾಡಿಲ್ಲ, ಪ್ರಚಾರಕ್ಕೆ ಅಂತ ಬಂದಿದ್ದರೂ ಅವರ ನಡೆ ಯಾರಿಗೂ ಸಮಾಧಾನ ತಂದಿಲ್ಲ. ಮುಸ್ಲಿಂ ನಾಯಕರ ಮನವೊಲಿಕೆ ಮಾಡದೇ ಜಮೀರ್ ನಿರ್ಲಕ್ಷ್ಯ ಮಾಡಿದ್ದಾರೆ ಎಂದು ಆರೋಪಿಸಲಾಗಿದ್ದು ಇದೀಗ ಸಚಿವ ಜಮೀರ್ ಅಹ್ಮದ್ ಖಾನ್ ವಿರುದ್ಧ ಶಿಸ್ತು ಕ್ರಮದ ತೂಗುಕತ್ತಿ ನೇತಾಡುತ್ತಿದೆ.

ಅಲ್ಪಸಂಖ್ಯಾತ ಸಮುದಾಯದ ಕೆಲವು ಶಾಸಕರೇ ಸಚಿವ ಜಮೀರ್ ಅಹ್ಮದ್ ವಿರುದ್ಧ ಹೈಕಮಾಂಡ್‌ಗೆ ದೂರು ನೀಡಿದ್ದು, ಸಚಿವ ಸಂಪುಟ ಪುನಾರಚನೆ ವೇಳೆ ಅವರನ್ನು ಸಂಪುಟದಿಂದ ಕೈಬಿಡಬೇಕು ಎಂದು ಒತ್ತಾಯಿಸಿದ್ದಾರೆ. ಇನ್ನು ಜಮೀರ್ 'ತಲೆದಂಡ' ವಾಗುವುದು ಬಹುತೇಕ ನಿಶ್ಚಿತ ಎಂಬ ಮಾತುಗಳು ಕೈ ಪಾಳಯದಲ್ಲಿ ಕೇಳಿಬರುತ್ತಿವೆ. ಮತ್ತೊಂದೆಡೆ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಹಾಗೂ ಎಂಎಲ್‌ಸಿ ನಸೀರ್ ಅಹ್ಮದ್ ಅವರಿಗೂ ರಾಜೀನಾಮೆ ನೀಡಲು ಹೈಕಮಾಂಡ್ ಕಟ್ಟುನಿಟ್ಟಿನ ಸೂಚನೆ ನೀಡಿದೆ.

## ರೋಟರಿ ಕ್ಲಬ್ ಆಫ್ ಬೆಳಗಾವಿ ದರ್ಪಣ ವತಿಯಿಂದ ಸಿಪಿಆರ್ ಜಾಗೃತಿ ಕಾರ್ಯಾಗಾರ – ಬಸವನ ಕುಡಚಿ ನಿವಾಸಿಗಳಿಗೆ ಜೀವ ರಕ್ಷಕ ಕೌಶಲ್ಯಗಳ ಅರಿವು



**ಬೆಳಗಾವಿ ಬೆಳಗಾವಿ ವಾರ್ತೆ** ರೋಟರಿ ಕ್ಲಬ್ ಆಫ್ ಬೆಳಗಾವಿ ದರ್ಪಣ ವತಿಯಿಂದ 2026ರ ಏಪ್ರಿಲ್ 8ರಂದು ಬಸವನ ಕುಡಚಿ, ಬೆಳಗಾವಿ ಯಲ್ಲಿ ಸಮುದಾಯ ಆರೋಗ್ಯ ಉಪಕ್ರಮ ದ ಅಂಗವಾಗಿ ಸಿಪಿಆರ್ ಜಾಗೃತಿ ಕಾಯಾರ್ಗಾರವನ್ನು ಆಯೋಜಿಸಲಾಯಿತು.

ಈ ಕಾರ್ಯಾಗಾರವನ್ನು ಕೆಎಲ್‌ಇ ವಿ.ಕೆ. ಇನ್‌ಸ್ಟಿಟ್ಯೂಟ್ ಆಫ್ ಡೆಂಟಲ್ ಸೈನ್ಸಸ್‌ನ ಎನ್‌ಎಸ್‌ಎಸ್ ಯುನಿಟ್ 2 ಸಹಯೋಗದಲ್ಲಿ ನಡೆಸಲಾಯಿತು. ಡಾ. ಆರ್ತಿ ನೀಲಿ ಮತ್ತು ಡಾ. ಸಿದ್ದಮೇಶ್ ಎಂ ಅವರು ಸಿಪಿಆರ್ ಕುರಿತಂತೆ ಸಂಪೂರ್ಣ ಮಾಹಿತಿಯನ್ನು ನೀಡುವುದರ ಜೊತೆಗೆ ಜೀವ ರಕ್ಷಕ ತಂತ್ರಗಳ ಪ್ರಾಯೋಗಿಕ ಪ್ರದರ್ಶನವನ್ನು ನೀಡಿದರು.

ಈ ಕಾರ್ಯಕ್ರಮದ ಪ್ರಯೋಜನ ಪಡೆಯುವವರು ಬಸವನ ಕುಡಚಿ ನಿವಾಸಿಗಳು, ಅವರು ಉತ್ಸಾಹದಿಂದ ಭಾಗವಹಿಸಿದರು. ಕಾರ್ಯಕ್ರಮದ ಯಶಸ್ಸಿಗೆ ಎನ್‌ಎಸ್‌ಎಸ್ ಸ್ವಯಂಸೇವಕರ ಸಕ್ರಿಯ ಭಾಗವಹಿಸುವಿಕೆ ಪ್ರಮುಖ ಪಾತ್ರ ವಹಿಸಿತು.

ಈ ಕಾರ್ಯಕ್ರಮವನ್ನು ರೋಟೇರಿಯನ್ ಲಕ್ಷ್ಮಿ ಚಾವಳಿ, ಕಾರ್ಯಕ್ರಮ ಅಧ್ಯಕ್ಷೆಯವರ ನೇತೃತ್ವದಲ್ಲಿ ನಡೆಸಲಾಯಿತು. ಕಾರ್ಯಕ್ರಮದಲ್ಲಿ ರೋಟೇರಿಯನ್ ಸಾವಿತಾ ವೆಸ್ನೆ, ಸಮುದಾಯ ಸೇವಾ ನಿರ್ದೇಶಕಿ ಮತ್ತು ರೋಟೇರಿಯನ್ ಸುರೇಖಾ ಮಮ್ಮಿಗಟ್ಟಿ, ಖಜಾಂಚಿಯವರ ಉಪಸ್ಥಿತಿ ಇದ್ದಿತು.

ಕಾರ್ಯಕ್ರಮವನ್ನು ಬಸವನ ಕುಡಚಿಯ ಅಧ್ಯಕ್ಷರು, ಶ್ರೀ ರಾಜಕುಮಾರ ಪಾಟೀಲ ಹಾಗೂ ಶ್ರೀ ಸುನಿಲ್ ಅವರ ಸಹಕಾರದಿಂದ ಯಶಸ್ವಾಗಿ ಸಂಯೋಜಿಸಲಾಯಿತು.

ಈ ಎಲ್ಲಾ ಕಾರ್ಯಕ್ರಮಗಳು ರೋಟೇರಿಯನ್ ಅಡ್ವೋಕೇಟ್ ವಿಜಯ ಲಕ್ಷ್ಮಿ ಮನ್ನಿಕೇರಿ, ಅಧ್ಯಕ್ಷರು ಹಾಗೂ ರೋಟೇರಿಯನ್ ಕಾವೇರಿ ಕಾರೂರು, ಕಾರ್ಯದರ್ಶಿ ಅವರ ಪರಿಣಾಮಕಾರಿ ನಾಯಕತ್ವದಲ್ಲಿ ನೆರವೇರಿಸಲಾಯಿತು.

**ಅಧ್ಯಕ್ಷರ ಅಭಿಪ್ರಾಯ:** ಈ ಸಂದರ್ಭದಲ್ಲಿ ಅಧ್ಯಕ್ಷರು ರೋಟೇರಿಯನ್ ಅಡ್ವೋಕೇಟ್ ವಿಜಯಲಕ್ಷ್ಮಿ ಮನ್ನಿಕೇರಿ ಅವರು ಸಿಪಿಆರ್ ಜ್ಞಾನವು ಜೀವ ಉಳಿಸುವ ಮಹತ್ವದ ಕೌಶಲ್ಯವಾಗಿದ್ದು, ಇಂತಹ ತರಬೇತಿ ಸಮುದಾಯದಲ್ಲಿ ತುರ್ತು ಪರಿಸ್ಥಿತಿಗಳಲ್ಲಿ ಜೀವ ಉಳಿಸಲು ಸಹಾಯಕವಾಗುತ್ತದೆ ಎಂದು ತಿಳಿಸಿದ್ದಾರೆ.

## ಇಂದಿನಿಂದ ಬೈಲಹೊಂಗಲದ ಶ್ರೀ ಬಗಳಾಂಬಾದೇವಿ ಜಾತ್ರಾ ಮಹೋತ್ಸವ



**ಬೆಳಗಾವಿ ವಾರ್ತೆ ಬೆಳಗಾವಿ:** ಶ್ರೀ ಬಗಳಾಂಭಾ ದೇವಿ ಬೈಲಹೊಂಗಲ 2..10– ನಗರದ ಹೊಸೂರು ರಸ್ತೆಯಲ್ಲಿರುವ ಶ್ರೀ ಬಗಳಾಂಬಾದೇವಿ ಜಾತ್ರಾ ಮಹೋತ್ಸವ ಏಪ್ರಿಲ್ 13 ಮತ್ತು 14 ರಂದು ಎರಡು ದಿನಗಳ ಕಾಲ ಅತ್ಯಂತ ಅದ್ದೂರಿಯಾಗಿ ಜರುಗಲಿದೆ. ಸೋಮವಾರ ಏಪ್ರಿಲ್ 13 ರಂದು ದೇವಿಗೆ ಪೂಜೆ, ಅಭಿಷೇಕ ಪಲ್ಲಕ್ಕಿ ಉತ್ಸವ ಹಾಗೂ ಕುಂಭ ಮೇಳ ಮಧ್ಯಾಹ್ನ 12 ಗಂಟೆಗೆ ಧರ್ಮಸಭೆ ಮತ್ತು ಸಂಜೆ 6 ಗಂಟೆಗೆ ಮಹಾತ್ಮರಿಂದ ಧರ್ಮಸಭೆ ರಾತ್ರಿ ಭಕ್ತರಿಂದ ಭಜನಾ ಕಾರ್ಯಕ್ರಮ ಜರುಗಲಿದೆ. ದಿವ್ಯ ಸಾನಿಧ್ಯವನ್ನು ಮುರಗೋಡ ದುರದುಂಡೇಶ್ವರ ಮಠದ ನೀಲಕಂಠ ಮಹಾಸ್ವಾಮಿಗಳು, ಬೈಲಹೊಂಗಲ ಮೂರುಸಾವಿರ ಮಠದ ಪ್ರಭು ನೀಲಕಂಠ ಮಹಾಸ್ವಾಮಿಗಳು, ಅಧ್ಯಕ್ಷತೆಯನ್ನು ಬೈಲಹೊಂಲದ ಶ್ರೀ ಬಗಳಾಂಬಾದೇವಿ ದೇವಸ್ಥಾನದ ಧರ್ಮಾಧಿಕಾರಿ ಡಾ.ವೀರಯ್ಯ ಮಹಾಸ್ವಾಮಿಗಳು ವಹಿಸಿಕೊಳ್ಳಲಿದ್ದಾರೆ. ಜೊತೆಗೆ ಚಿಪ್ಪಲಕಟ್ಟಿಯ ಡಾ. ಕಲೇಶ್ವರ ಹಿರೇಮಠ, ಮಹಾಸ್ವಾಮಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ.

ಮಂಗಳವಾರ ಏಪ್ರಿಲ್ 14 ರಂದು ಶ್ರೀ.ಮ.ನಿ.ಪ್ರ.ಮುರಘಂದ್ರ ಮಹಾಸ್ವಾಮಿಗಳಿ ಸೋಮಶೇಖರಮಠ ಮುನವಳ್ಳಿ ದಿವ್ಯ ಸಾನಿಧ್ಯ, ಶ್ರೀ.ಪ್ರ.ಬ್ರ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ಸತ್ತಿಗೇರಿ ದಿವ್ಯ ಸಾನಿಧ್ಯ. ಬೈಲಹೊಂಗಲ ಬಗಳಾಂಬಾದೇವಿ ದೇವಸ್ಥಾನದ ಧಮಾಧಿಕಾರಿ ವೀರಯ್ಯ ಮಹಾಸ್ವಾಮೀಜಿ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ. ಮತ್ತು ಬೆಳಗ್ಗೆ ರುದ್ರಗಣಹೋಮ, ಮಧ್ಯಾಹ್ನ ಬಗಳಾಂಬಾದೇವಿ ಪ್ರಶಸ್ತಿ ವಿತರಣೆ, ಸಂಜೆ ಮಹಾತ್ಮರಿಂದ ಧರ್ಮಸಭೆ, ಉಡಿತುಂಬುವ ಕಾರ್ಯಕ್ರಮ ನಡೆಯಲಿದೆ. ನಂತರ ರಾತ್ರಿ ದೀಪೋತ್ಸವ ಹಾಗೂ ಭಕ್ತರಿಗೆ ಮಹಾಪ್ರಸಾದ ವ್ಯವಸ್ಥೆ ಇರಲಿದೆ. ಇದರೊಂದಿಗೆ ಜಾತ್ರೆಯು ಸಂಪನ್ನಗೊಳ್ಳಲಿದೆ. ಜಾತ್ರಾ ಮಹೋತ್ಸ ವದಲ್ಲಿ ನಾಡಿನ ಗಣ್ಯ ಮಠಾಧೀಶರು, ಶರಣ ಬಳಗ ಭಾಗವಹಿಸಲಿದೆ.


ಮಾತೋಶ್ರೀ ಬಗಳಾಂಬದೇವಿ ಪ್ರಶಸ್ತಿ ಭಕ್ತರಿಗೆ ವಿತರಣೆ. ಜಾತ್ರೆಯಲ್ಲಿ ಸುತ್ತಲಿನ ಭಕ್ತಗಣ ಭಾಗವಹಿಸಿ ಜಾತ್ರೆಯನ್ನು ಯಶಸ್ವಿಗೊಳಿಸಬೇಕು ಎಂದು ದೇವಸ್ಥಾನ ಪ್ರಕಟಣೆಯಲ್ಲಿ ತಿಳಿಸಿದೆ.

## ಅಂಬೇಡ್ಕರ್ ಜಯಂತಿ: ಇಂದು ವಿಚಾರಗೋಷ್ಠಿ ಆಯೋಜನೆ

ಧಾರವಾಡ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಸಮಾಜ ಕಲ್ಯಾಣ ಇಲಾಖೆ ಹಾಗೂ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಸಹಯೋಗದಲ್ಲಿ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ.ಆರ್.ಅಂಬೇಡ್ಕರ್ ಅವರ 135 ನೇ ಜಯಂತಿ ಅಂಗವಾಗಿ ಏಪ್ರಿಲ್ 13, 2026 ರಂದು ಸಂಜೆ 4 ಗಂಟೆಗೆ ಧಾರವಾಡ ನಗರದ ಸನ್ಮತಿ ಮಾರ್ಗದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ವಿಚಾರಗೋಷ್ಠಿಯನ್ನು ಆಯೋಜಿಸಲಾಗಿದೆ.

ಜಿಲ್ಲಾಧಿಕಾರಿ ಸ್ನೇಹಲ್ ಆರ್. ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು. ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ಪಾಟೀಲ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಮಾನವಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಸದಾನಂದ ಬಿ.ಸುಗಂಧಿ ಅವರು ವಿಚಾರಗೋಷ್ಠಿಯಲ್ಲಿ ಹಿಂದೂ ಕೋಡ್ ಬಿಲ್ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಗಳ ಕುರಿತು ಉಪನ್ಯಾಸ ನೀಡುವರು ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಂಥನ ಹಾಗೂ ಸ್ಪೇಸ್ ಟ್ರಾವೆಲ್ ಆ್ಯಂಡ್ ಅದರ್ ಒನ್ ಆಕ್ಟ್ ಪ್ಲೇಸ್ ಗ್ರಂಥಗಳ ಲೋಕಾರ್ಪಣೆ



**ಬೆಳಗಾವಿ ವಾರ್ತೆ ಹುಬ್ಬಳ್ಳಿ:** ಸಾಹಿತಿ ಪ್ರೊ ಶಿವಪುತ್ರಪ್ಪ ಆರ್ ಆಶಿ ಅವರ ಮಂಥನ ಹಾಗೂ ಸ್ಪೇಸ್ ಟ್ರಾವೆಲ್ ಆ್ಯಂಡ್ ಅದರ್ ಒನ್ ಆಕ್ಟ್ ಪ್ಲೇಸ್ ಎಂಬ ಎರಡು ಗ್ರಂಥಗಳ ಲೋಕಾರ್ಪಣೆಯ ಶುಭ ಸಂದರ್ಭದಲ್ಲಿ ಕನ್ನಡ ರಾಜ್ಯೋತ್ಸವದ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಧೀಮಂತ ಪ್ರಶಸ್ತಿ ಪುರಸ್ಕೃತ, ಹಿರಿಯ ನಾಗರಿಕರಾದ 72 ವರ್ಷದ ಹಿರಿಯ ಸಾಹಿತಿ, ನಿವೃತ್ ಪ್ರಾಚಾರ್ಯ ಪ್ರೊ ಶಿವಪುತ್ರಪ್ಪ ಆರ್ ಆಶಿ ಅವರು ಸರಕಾರಿ ಪದವಿಪೂರ್ವ ಕಾಲೇ ಜುಗಳಲ್ಲಿ ಇಂಗ್ಲೀಷ ಭಾಷಾ ಉಪನ್ಯಾ ಸಕರಾಗಿ ಮುಂದೆ ಪ್ರಾಚಾರ್ಯರಾಗಿ ಸುದೀರ್ಘ 35 ವರ್ಷಗಳ ಸಾರ್ಥಕ ಶಿಕ್ಷಕ ವೃತ್ತಿ ಸೇವೆ ಸಲ್ಲಿಸಿ, ನಿವೃತ್ತರಾಗಿರುವ, ಕವಿಗ ಳು, ಕಥೆಗಾರರು, ಚಿಂತಕರು, ಅನುವಾ ದಕರು, ಮಾಗ9ದರ್ಶಕರು, ಹಿತೈಸಿಗಳಾದ ಪ್ರೊ ಎಸ್. ಆರ್. ಆಶಿ ಗುರುಗಳಿಗೆ ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ, ಬಸವ ಪರಿಸರ ಸಂರಕ್ಷಣಾ ಸಮಿತಿಯ ವತಿಯಿಂದ ಮಾಲಾರ್ಪಣೆ ಮಾಡಿ ಗ್ರಂಥ ನೀಡಿ ಗೌರವ ಪೂರ್ವಕವಾಗಿ ಶ್ರದ್ಧಾ ಭಕ್ತಿಯಿಂದ ಅಭಿನಂದನೆಗಳನ್ನು ಸಲ್ಲಿಸಲಾಯಿತು. ಹುತ್ಪೂರ್ವಕವಾಗಿ ಶುಭಾಶಯ ಕೋರಿದರು. ಅನ್ನಪೂರ್ಣ ಆಶಿ, ಸೋಹನ್ ಸುರೇಶ ಹೊರಕೇರಿ, ಮಾಜಿ ಸಂಸದರಾದ ಐ ಜಿ ಸನದಿ , ಕುವೆಂಪು ಭಾಷಾಭಾರತಿ ಅಧ್ಯಕ್ಷ ಡಾ ಚನ್ನಪ್ಪ ಕಟ್ಟಿ, ಅರುಣಕುಮಾರ್ ಹಬ್ಬು, ಮಲ್ಲಿಕಾರ್ಜುನ ಸಿದ್ದಣ್ಣವರ, ಪ್ರೊ ಟಿ ಜಿ ಭಟ್ ಹಾಸಣಗಿ , ಡಾ ಆಶಾ ಎಸ್ ರಬ್, ಪ್ರೊ ಎಸ್ ವಿ ಪಟ್ಟಣಶೆಟ್ಟಿ , ಕೆ ಶಾಂತಾ ಬಸವರಾಜ್, ಪ್ರೊ ಎಸ್ ಎಂ ಸಾತ್ಮಾರ್, ರಾಣಿಚನ್ನಮ್ಮ ಪರಿಸರ ಸೇವಾ ಸಮಿತಿಯ ಕಾರ್ಯದರ್ಶಿ, ಬಸವ ಪರಿಸರ ಸಂರಕ್ಷಣಾ ಸಮಿತಿಯ ಕಾರ್ಯದರ್ಶಿ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ ಜಿಲ್ಲಾ ಘಟಕದ ಉಪಾಧ್ಯಕ್ಷ, ಕರ್ನಾಟಕ ವಚನ ಸಾಹಿತ್ಯ ಪರಿಷತ್‌ನ ಜಿಲ್ಲಾ ಘಟಕದ ಕಾರ್ಯಾಧ್ಯಕ್ಷ, ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ ಟ್ರಸ್ಟಿ, ಗ್ರಂಥಪಾಲಕ ಡಾ. ಸುರೇಶ ಡಿ. ಹೊರಕೇರಿ, ಪತ್ರಕರ್ತರು, ಸಾಹಿತಿ ಕುಮಾರ ಬೇಂದ್ರೆ, ಪ್ರಕಾಶ್ ಕಡಮೆ, ಎಸ್‌ಐನೇಕಾರ , ಕೆ ಎ ದೊಡ್ಡಮನಿ , ಡಾ ಸಿದ್ದೇಶ್ವರ ಕಟಕೋಳ , ರಾಜೀವ್ ಆಶಿ, ಪ್ರೊ ಕೆ ಎಸ್ ಕೌಜಲಗಿ, ನಿರ್ಮಲಾ ಶೆಟ್ಟರ್, ಚನ್ನಬಸಪ್ಪ ಧಾರವಾಡಶೆಟ್ಟರ್ , ವೀರಣ್ಣ ಹೂಲಿ , ಎಂ ಪಿ ಕುಂಬಾರ , ಇತರರು ಉಪಸ್ಥಿತರಿದ್ದರು. ಪ್ರೊ ಎಸ್. ಆರ್. ಆಶಿ ಅವರು ಸದಾ ಸಾಹಿತ್ಯ ಚಟುವಟಿಕೆಗಳಲ್ಲಿ ಕ್ರೀಯಾಶೀಲರಾಗಿ ಭಾಗವಹಿಸುತ್ತಾ, ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಎರಡು ಸೆಲೆ, ಒಂದು ನೆಲೆ ಕವನ ಸಂಕಲನ ಕುರಿತು ವಿಮರ್ಶೆ, ಮನಕ್ಕೆ ನೆನಹಾಗಿ ಹಾಗೂ ವರ್ತುಲ ಕವನ ಸಂಕಲನ, ಅರಿವಿನ ದಾರಿ, ನಗುವೊಂದು ರಸಪಾಕ ಚಿಂತನ ಹಾಗೂ ಪ್ರಬಂದಗಳ ಸಂಕಲನ, ಮುಂ ತಾದ ಕೃತಿಗಳು ಹೊರಬಂದಿವೆ. ಪ್ರೊ ಆಶಿ ಅವರ ಸರಳ ವ್ಯಕ್ತಿತ್ವ, ಮೃದು ಭಾಷೆ, ಕನ್ನಡ ಭಾಷೆಯ ಮೇಲಿನ ಅಭಿಮಾನ ವನ್ನು ಕಂಡು ಗ್ರಂಥಪಾಲಕ ಡಾ. ಸುರೇಶ ಡಿ. ಹೊರಕೇರಿ ಅವರು ಅಪಾರ ಮೆಚ್ಚುಗೆ ವ್ಯಕ್ತಪಡಿಸಿದರು.

# ಬುದ್ಧ, ಬಸವ, ಅಂಬೇಡ್ಕರ್ ಸಮಾಜಕ್ಕೆ ನೀಡಿದ ಕೊಡುಗೆ ದೊಡ್ಡದು : ಫ.ಗು. ಸಿದ್ದಾಪುರ




**ಬೆಳಗಾವಿ ವಾರ್ತೆ ವಿಜಯಪುರ:** ಯಾವುದೋ ಶತಮಾನದಲ್ಲಿ ಆಗಿ ಹೋದ ಬುದ್ಧ, ಬಸವ, ಅಂಬೇಡ್ಕರ್ ಅವರನ್ನು ನಾವು ಇವತ್ತಿಗೂ ನೆನೆಯುತ್ತೇವೆ. ಅಂದರೆ ಅವರು ಸಮಾಜಕ್ಕೆ ನೀಡಿದ ಕೊಡುಗೆ ದೊಡ್ಡದು ಎಂದು ಹಿರಿಯ ಸಾಹಿತಿ ಫ.ಗು. ಸಿದ್ದಾಪುರ ಅವರು ಹೇಳಿದರು.

ನಗರದ ದರಾಬಾರ್ ಪ್ರೌಢ ಶಾಲೆ ಮೈದಾನದಲ್ಲಿ ಮೇ ಸಾಹಿತ್ಯ ಮೇಳ ವಿಜಯಪುರ ಬಳಗ ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಆಶ್ರಯದಲ್ಲಿ ಏಪ್ರಿಲ್ 10ರಿಂದ 14ರ ವರೆಗೆ 5ದಿನಗಳ ಕಾಲ ಹಮ್ಮಿಕೊಂಡಿರುವ ಬಿಜಾಪುರ ಬುದ್ಧ, ಬಸವ, ಬಾಬಾಸಾಹೇಬ ಅಂಬೇಡ್ಕರ್ ಪುಸ್ತಕ ಮೇಳದಲ್ಲಿ ಎರಡನೇ ದಿನದ ಕವಿಗೋಷ್ಠಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಅತಿಥಿ ಸ್ಥಾನ ವಹಿಸಿ ಹಿರಿಯ ಸಾಹಿತಿ ಸುಭಾಸ ಯಾದವಾಡ ಅವರು ಮಾತನಾಡಿ, ಕಡಿಮೆ ಶಬ್ದ ಬಳಸಿ ಹೆಚ್ಚು ಹೇಳುವ ಕಲೆ ಕವಿಗೆ ಮತ್ತು ಕವಿತೆಗೆ ಇದೆ ಎಂದು ಹೇಳಿದರು.

ಡಾ ಮಲ್ಲಿಕಾರ್ಜುನ ಮೇತ್ರಿ ಅವರು ಆಶಯನುಡಿ ಮಾತನಾಡಿ, ಇಡೀ ಜಗತ್ತಿನ ದಾರ್ಶನಿಕರ ಮೊದಲ ಸಾಲಿನಲ್ಲಿ ನಿಲ್ಲುವ ಬುದ್ಧ, ಬಸವ, ಅಂಬೇಡ್ಕರ್ ಅವರ ಹೆಸರಲ್ಲಿ ಪುಸ್ತಕ ಮೇಳ ಹಮ್ಮಿಕೊಳ್ಳುವ ಮೂಲಕ ಮತ್ತೆ ಮತ್ತೆ ಅವರನ್ನು ನೆನೆಯುತ್ತೇವೆ. ಅದು ಅವರು ಸಮಾಜಕ್ಕೆ ಕೊಟ್ಟ ಕೊಡುಗೆಯನ್ನು ಸ್ಮರಿಸುವುದಾಗಿದೆ ಎಂದರು.

ಕವಿಗಳಲ್ಲಿ ಇಂದು ಪ್ರಗತಿಪರ ನೆಲೆ ಕಳೆದುಕೊಳ್ಳುತ್ತಿದೆ. ನಮ್ಮ ಮನೋಶಕ್ತಿ ಹೆಚ್ಚಿಸುವ ಶಕ್ತಿ ಕಾವ್ಯಕ್ಕಿದೆ. ಕಾವ್ಯ ಕಟ್ಟುವುದು ಕುಶಲಕರ್ಮಿ ಕೆಲಸವಾಗಿದೆ ಎಂದು ಹೇಳಿದರು.

ಕವಿಗೋಷ್ಠಿಯಲ್ಲಿ ಡಾ. ಮೈನುದ್ದಿನ್ ರೇವಡಿಗಾರ, ಚಂದ್ರಶೇಖರ ಸಿಂಗಾಡಿ, ಮುದ್ದಣ್ಣ ಭೀಮನಗರ, ಶಿವಾಜಿ ಮೋರೆ, ಸಮೀರ ಹಾದಿಮನಿ ಕವನ ವಾಚಿಸಿದರು.

ಕವಿಗೋಷ್ಠಿಗೂ ಮೊದಲು ಎರಡನೇ ದಿನದ ನಾಲ್ಕನೇ ಗೋಷ್ಠಿ ನನ್ನ ನೆಚ್ಚಿನ ಪುಸ್ತಕ ವಿದ್ಯಾರ್ಥಿಗಳ ಮಾತು ಸಂವಾದದಲ್ಲಿ ಸುಷ್ಮಾ ಪವಾರ ಸಾವಿತ್ರಿಬಾಯಿ ಫುಲೆ ಅವರ ಜೀವನ ಚರಿತ್ರೆ, ಪವಿತ್ರಾ ಕುಂಬಾರ ರಮಾಬಾಯಿ ಅಂಬೇಡ್ಕರ್ ಅವರ ಜೀವನ ಚರಿತ್ರೆ ಸುಕನ್ಯಾ ಹತ್ತಿ ಅವರು ಹೋರಾಟದ ಹಾದಿಗೆ ಹಣತೆ ಹಿಡಿದವರು ಕೃತಿ ಕುರಿತು ಮಾತನಾಡಿದರು. ಕಾರ್ಯಕ್ರಮದಲ್ಲಿ ಸಿದ್ರಾಮ ಬಿರಾದಾ ರ ಬಸವರಾಜ ಸೂಳಿಬಾವಿ, ಅನಿಲ ಹೊಸಮನಿ, ಸುರೇಶ ಬಿಜಾಪುರ, ಚೆನ್ನು ಕಟ್ಟಿಮನಿ ವೈ.ಎಸ್. ಗುಣಕಿ. ಸಂಘರ್ಷ ಹೊಸಮನಿ, ಬಿ.ಆರ್. ಬನಸೋಡೆ, ರಾಜೇಶ ಚಲವಾದಿ ಉಪಸ್ಥಿತರಿದ್ದರು.

# ಪೊಲೀಸರ ಸೇವೆಗೆ ಬೆಲೆ ಕಟ್ಟಲಾಗದು

**ಬೆಳಗಾವಿ ವಾರ್ತೆ ಬಸವನ ಬಾಗೇವಾಡಿ:** ಸಾರ್ವಜನಿಕರ ನೆಮ್ಮದಿ ಮತ್ತು ಅಪರಾಧ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಹಗಲಿರಳು ಶ್ರಮಿಸುವ ಪೊಲೀಸರ ಸೇವೆಗೆ ಬೆಲೆ ಕಟ್ಟಲಾಗದು ಎಂದು ಸ್ಥಳೀಯ ವಿರಕ್ತಮಠದ ಶ್ರೀ ಮ ನಿ ಪ್ರ ಸಿದ್ದಲಿಂಗ ಮಹಾಸ್ವಾಮಿಗಳು ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದರು ತಾಲೂಕ ಆದರ್ಶ ಶಿಕ್ಷಕರ ವತಿಯಿಂದ ಸ್ಥಳೀಯ ವಿರಕ್ತಮಠದಲ್ಲಿ ಆಯೋಜಿಸಿದ್ದ ಮುಖ್ಯಮಂತ್ರಿಗಳಿಂದ ಬಂಗಾರದ ಪದಕ ಪಡೆದ ಆರಕ್ಷಕ ಮನಗೂಳಿ ಪೊಲೀಸ್ ಠಾಣೆಯ ರಾಮನಗೌಡ ಬಿರಾದಾರ್ ಇವರ ಸನ್ಮಾನ ಕಾರ್ಯಕ್ರಮದಲ್ಲಿ ಹೇಳಿದರು ಇವರು ಪ್ರತಿಫಲ ಪಕ್ಷ ಇಲ್ಲದೆ ಸಮಾಜದ ಒಳಿತಿಗಾಗಿ ಕಾರ್ಯನಿರ್ವಹಿಸುತ್ತಿರುವ ರಾಮನಗೌಡ ಬಿರಾದಾರ ನಿಸ್ವಾರ್ಥ ಸೇವೆ ಗುರುತಿಸಿ ಮುಖ್ಯಮಂತ್ರಿ ಪದಕ್ಕೆ ಪಾತ್ರರಾಗಿದ್ದಾರೆ ಎಂದರು ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳಾದ ಶ್ರೀಮತಿ ಶಿಲ್ಪಾ ಹಿರೇಮಠ ಮಾತನಾಡಿ ಇವರ ಸೇವೆಯನ್ನು ಗುರುತಿಸಿ ಮುಖ್ಯಮಂತ್ರಿ ಪದಕ ಬಂದಿರುವುದು ಅವರ ಕಾರ್ಯ ಕ್ಷಮತೆಯನ್ನು ಇನ್ನಷ್ಟು ಹೆಚ್ಚಿಸಿದೆ ಕಾನೂನು ಸುವ್ಯವಸ್ಥೆ ಗಟ್ಟಿಗೊಳಿಸುವಲ್ಲಿ ಪೊಲೀಸರ ಕಾರ್ಯ ಅಪ್ರತಿಮವಾಗಿದೆ ಕಾನೂನು ಸುವ್ಯವಸ್ಥೆ ಹಾಗೂ ಸಾರ್ವಜನಿಕರ ಸುರಕ್ಷತೆ ಕಾಪಾಡಿ ಸಮಾಜದಲ್ಲಿ ನೆಮ್ಮದಿಯ ಜೀವನಕ್ಕೆ ಕಾರಣವಾಗಿದೆ ಪೊಲೀಸರ ಕಾರ್ಯ ಸರಳವಲ್ಲ ಅದೊಂದು ಅತ್ಯಂತ ಕಠಿಣ ಕೆಲಸ ಈ ಸಂದರ್ಭ ದಲ್ಲಿ ನಾನು ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೆನ್ನಸಲೇಬೇಕು ಅವರು ನಮಗೆ ಸಂಸ್ಕಾರದ ಜೊತೆಗೆ ಸರಳತೆಯನ್ನು ಹಾಗೂ ರಾಮಾಯಣ ಮಹಾಭಾರತವನ್ನು ತಿಳಿಸಿಕೊಟ್ಟವರು ರಾಮನಗೌಡರಿಗೆ ಮುಖ್ಯಮಂತ್ರಿ ಪದಕ ಲಭಿಸಿದ್ದಕ್ಕೆ ಮುಖ್ಯ ಕಾರಣ ಅವರ ಕುಟುಂಬ ಅವರಿಗೆ ಸ್ಪೂರ್ತಿ ಎಂದರು ಪಿಕೆಪಿಎಸ್ ಸೊಸೈಟಿ ಅಧ್ಯಕ್ಷರಾದ ಶ್ರೀ ಸಂಗನಗೌಡ ಚಿಕ್ಕಂಡ ಮಾತನಾಡಿ ಪೋಲಿಸ್ ಇಲಾಖೆಯು ಎಲ್ಲಾ ಇಲಾಖೆಯಲ್ಲಿ ಕೆಲಸ ಮಾಡುತ್ತದೆ ಮನಗೂಳಿಯ ಕೆನರಾ ಬ್ಯಾಂಕಿನಲ್ಲಿ ಬಂಗಾರ ಕಳವು ಆದ ಪ್ರಕರಣದಲ್ಲಿ ಆ ಕಳ್ಳರನ್ನು ಗುರುತು ಹಚ್ಚುವ ಕೆಲಸದಲ್ಲಿ



ರಾಮನಗೌಡರು ಒಬ್ಬರು ಆ ಕಳ್ಳರನ್ನು ಹಿಡಿದ ಪ್ರಯುಕ್ತ ಇವರ ಸೇವೆಯನ್ನು ಗುರುತಿಸಿ ಮುಖ್ಯಮಂತ್ರಿ ಪದಕ ಲಭಿಸಿದೆ ಇನ್ನೂ ಕಾರ್ಯಕ್ಷಮತೆ ಹೆಚ್ಚಿಸಿ ಮುಂದಿನ ದಿನಮಾನಗಳಲ್ಲಿ ಪ್ರಧಾನ ಮಂತ್ರಿಗಳ ಪದಕ ಲಭಿಸಲೆಂದು ಹಾರೈಸುತ್ತೇನೆ ಈ ಸನ್ಮಾನದಿಂದ ಅವರ ಕರ್ತವ್ಯ ನಿಷ್ಠೆಯನ್ನು ಇನ್ನಷ್ಟು ಹೆಚ್ಚಿಸಿವೆ ತಾಲೂಕು ಆದರ್ಶ ಶಿಕ್ಷಕರ ವೇದಿಕೆಯ ಅಧ್ಯಕ್ಷರಾದ ಶ್ರೀ ಎಂ ಎನ್ ಯಾಳವಾರ ಗುರುಗಳ ಅಳಿಯಂದಿರು ರಾಮನಗೌಡರು ಇವರ ಧರ್ಮಪತ್ನಿ ಜ್ಯೋತಿಯವರು ಇದಕ್ಕೆ ಸ್ಪೂರ್ತಿಯಾಗಿದ್ದಾರೆ ಎಂದರು ಆರಕ್ಷಕ ಶಂಕರಗೌಡ ಬಿರಾದಾರ್ ಮಾತನಾಡಿ ಇಂತಹ ಸನ್ಮಾನಗಳಿಂದ ಪೊಲೀಸರ ಕೆಲಸ ಕಾರ್ಯ ನಿರ್ವಹಿಸಲು ಸ್ಪೂರ್ತಿಯಾಗುತ್ತದೆ ನಾವು ಎಷ್ಟೇ ಕೆಲಸ ಮಾಡಿದರು ಅದು ನಮ್ಮ ಮೇಲಾಧಿಕಾರಿಗಳಿಗೆ ಸಲ್ಲುತ್ತದೆ ಎಂದರು ಕಾರ್ಯಕ್ರಮದಲ್ಲಿ ಶಿಕ್ಷಣ ಸಂಯೋಜಕರಾದ ಶ್ರೀ ಎಸ್ ಎಸ್ ಅಂಬಲಿ ಅವರು ಮಾತನಾಡಿ ಆದರ್ಶ ಶಿಕ್ಷಕರ ವೇದಿಕೆಯು ಇಂಥ ಕೆಲಸಗಾರರನ್ನು ಗುರುತಿಸಿ ಸನ್ಮಾನ ಮಾಡುವುದು ಒಳ್ಳೆಯ ಕೆಲಸ ಅಲ್ಲದೆ ಈ ವೇದಿಕೆಯು ತಾಲೂಕಿನ ಪ್ರತಿ ಶಾಲೆಯ ಮೈದಾನವನ್ನು ಸ್ವಚ್ಛಗೊಳಿಸುವುದಲ್ಲದೆ ಅನೇಕ ಶಿಕ್ಷಕರ ಕಾರ್ಯ ಚಟುವಟಿಕೆಗಳನ್ನು ಮಾಡುತ್ತಾ ಬಂದಿದೆ ರಾಮನಗೌಡರ ಮೇಲೆ ಒಂದು ಸ್ವರಚಿತ ಕವನ ಬರೆದು ಓದಿದರು ಕಾರ್ಯಕ್ರಮದಲ್ಲಿ ಡಾ. ಮಡಿಕೇಶ್ವರ್ ಮಾತನಾಡಿದರು ಅದೇ ರೀತಿಯಾಗಿ ಜಿಲ್ಲಾ ಆದರ್ಶ ಶಿಕ್ಷಕರ ವೇದಿಕೆಯ ಅಧ್ಯಕ್ಷರಾದ ಉಮೇಶ್ ಕೌಲಿಗಿ ಅವರು ಮಾತನಾಡಿ ಆದರ್ಶ ಶಿಕ್ಷಕರ ವೇದಿಕೆಯು ಶಿಕ್ಷಕರ ಪರವಾಗಿ ಅನೇಕ ಕೆಲಸಗಳನ್ನು ಮಾಡುತ್ತಾ ಬಂದಿದೆ ಅದರಲ್ಲಿ ಸಾಧಕರನ್ನು ಗುರುತಿಸಿ ಪ್ರತಿ ವರ್ಷವೂ ಸನ್ಮಾನಿಸುತ್ತಾ ಬಂದಿದೆ ಇಂಥ ಸಾಧಕರನ್ನು ಗುರುತಿಸಿ ಇವತ್ತು ನಮ್ಮ ವೇದಿಕೆಯಿಂದ ಸನ್ಮಾನ ಮಾಡಿದ್ದು ನನಗೆ ಬಹಳ ಸಂತೋಷದವಾಗಿದೆ ಎಂದರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ನಿವೃತ್ತ ಉಪರಾಚಾರ್ಯರಾದ ಶ್ರೀ ಎಸ್ ಎಸ್ ಜಳಕಿಯವರು ಅಧ್ಯಕ್ಷೀಯ ಭಾಷಣ ಮಾಡಿದರು ವೇದಿಕೆಯ ಮೇಲೆ ಬಸವನ ಬಾಗೇವಾಡಿ ವಲಯದ ಶಿಕ್ಷಣ ಸಂಯೋಜಕರಾದ ಶ್ರೀಮತಿ ಎ ಎಸ್ ಗುಬ್ಬ ನಿವೃತ್ತಿ ಉಪನ್ಯಾಸಕರಾದ ಶ್ರೀಪಿಎಲ್ ಹಿರೇಮಠ ಶಿಕ್ಷಕರ ಸೊಸೈಟಿಯ ಅಧ್ಯಕ್ಷರಾದ ಶ್ರೀ ಎನ್ ಎಸ್ ಕಾಳಗಿ ಶ್ರೀಮತಿ ಜ್ಯೋತಿ ಬರದಾರ ರವಿ ಚಿಕ್ಕಕೊಂಡ ಹಾಗೂ ಸಂಜೆವಾಣಿ ಪತ್ರಿಕೆಯ ತಾಲೂಕ ವರದಿಗಾರರಾದ ಶ್ರೀ ಎಂಬಿ ತೋಟದ ಪುರಸಭೆಯ ಮಾಜಿ ಸದಸ್ಯರಾದ ದೇವೇಂದ್ರ ಚೌಹಾನ ವೇದಿಕೆಯ ಮೇಲಿದ್ದರು ಪ್ರಸ್ತಾವಿಕವಾಗಿ ಶ್ರೀ ಎಚ್ ಬಿ ಬಾರಿ ಕಾಯಿ ತಾಲೂಕ ಶಿಕ್ಷಕರ ಸಂಘದ ಅಧ್ಯಕ್ಷರು ಮಾತನಾಡಿದರು ಸನ್ಮಾನ ಸ್ವೀಕರಿಸಿಕೊಂಡ ಶ್ರೀರಾಮನಗೌಡ ಬಿರಾದರ್ ಮಾತನಾಡಿ ನನಗೆ ಸನ್ಮಾನ ಮಾಡಿದ ಎಲ್ಲರಿಗೂ ಹೃದಯಪೂರ್ವಕ ಧನ್ಯವಾದಗಳು ಅರ್ಪಿಸುವದರ ಜೊತೆಗೆ ನನಗೆ ಎಲ್ಲಾ ಸ್ಪೂರ್ತಿ ನಮ್ಮ ಮಾವ ಮತ್ತು ಅತ್ತೆ ಅವರಿಗೆ ತಂದೆ ತಾಯಿ ಅಂದರೆ ತಪ್ಪಾಗಲಾರದು ಇವರ ಜೊತೆಗೆ ನನ್ನ ಧರ್ಮಪತ್ನಿ ಪದಕ ಬರಲು ಕಾರಣಿಕರ್ತರು ಸನ್ಮಾನದಿಂದ ನಮ್ಮ ಕರ್ತವ್ಯವನ್ನು ಇನ್ನಷ್ಟು ಹೆಚ್ಚಿಸಿವೆ ನಾವು ಕಳ್ಳರನ್ನು ಹಿಡಿದು ಸಾರ್ವಜನಿಕರ ಬಂಗಾರವನ್ನು ಅವರಿಗೆ ಒಪ್ಪಿಸಿದಾಗ ಅವರ ಮುಖದಲ್ಲಿದ್ದ ಸಂತೋಷ ಕಂಡು ನನಗೆ ನನ್ನ ಸೇವೆ ಸಾರ್ಥಕವಾಯಿತು ಎನಿಸಿತು ಕಾರ್ಯಕ್ರಮದ ನಿರೂಪಣೆಯನ್ನು ಶಿಕ್ಷಕರಾದ ಕೊಟ್ರೇಶಿ ಹೆಗ್ಡಾಳ್ ನಡೆಸಿಕೊಟ್ಟರು ಅನೇಕ ಸಂಘ ಸಂಸ್ಥೆಗಳಿಂದ ಹಾಗೂ ಬಂಧು ಬಳಗದಿಂದ ಶ್ರೀ ರಾಮನಗೌಡರಿಗೆ ಸನ್ಮಾನ ಜರುಗಿತು

# ಹಸಿರು ಕ್ರಾಂತಿಯ ಹರಿಕಾರ ಡಾ ಬಾಬು ಜಗಜೀವನರಾಂ ಅವರ 119ನೇ ಹಾಗೂ ಸಂವಿಧಾನ ಶಿಲ್ಪಿ ಭಾರತರತ್ನ ಡಾಃ ಬಿ.ಆರ್.ಅಂಬೇಡ್ಕರರವರ 135ನೇ ಜಯಂತಿ

ಗದಗ: ಹಸಿರು ಕ್ರಾಂತಿಯ ಹರಿಕಾರ ಡಾ ಬಾಬು ಜಗಜೀವನರಾಂ ಅವರ 119ನೇ ಹಾಗೂ ಸಂವಿಧಾನ ಶಿಲ್ಪಿ ಭಾರತರತ್ನ ಡಾಃ ಬಿ.ಆರ್.ಅಂಬೇಡ್ಕರರವರ 135ನೇ ಜಯಂತಿಯನ್ನು ದಿನಾಂಕಃ14–04–2026 ರಂದುಬೆಳಿಗ್ಗೆ 9.00 ಘಂಟೆಗೆ ಎರಡು ಮಹಾನ ನಾಯಕರುಗಳ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದರೊಂದಿಗೆ ಶಿರಹಟ್ಟಿಯ ಶ್ರೀ ಜಗದ್ಗುರು ಫಕ್ಕೀರೇಶ್ವರ ಮಠದಿಂದ ಮೆರವಣಿಗೆಯನ್ನು ಪ್ರಾರಂಭಿಸಿ ಗಾಂಧಿ ಸರ್ಕಲ್, ಬಸವೇಶ್ವರ ಸರ್ಕಲ್, ಸಂಗೋಳಿ ರಾಯಣ್ಣ ಸರ್ಕಲ್, ಡಾಃ ಬಿ.ಆರ್.ಅಂಬೇಡ್ಕರ ಸರ್ಕಲ್, ನೆಹರು ಸರ್ಕಲ್ ಮುಖಾಂತರ ಸಂಚರಿಸಿ ನಂತರ ತಹಶೀಲ್ದಾರ ಕಛೇರಿ ಆವರಣವನ್ನು ತಲುಪಿದ ನಂತರ ವೇದಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಸದರಿ ಕಾರ್ಯಕ್ರಮಕ್ಕೆ ಎಲಗಣ್ಯ ಮಾನ್ಯರು, ದಲಿತ ಸಂಘರ್ಷ ಸಮಿತಿಯ ಸದಸ್ಯರು, ಸಾರ್ವಜನಿಕರು, ಅಧಿಕಾರಿ ಹಾಗೂ ಸಿಬ್ಬಂದಿಗಳು ಮೆರವಣಿಗೆ ಮತ್ತು ವೇದಿಕೆ ಕಾರ್ಯಕ್ರಮಕ್ಕೆ ಹಾಜರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಶಿರಹಟ್ಟಿ ತಹಶೀಲ್ದಾರರು ತಿಳಿಸಿದ್ದಾರೆ.

# ಮಹಾತ್ಮಾ ಜ್ಯೋತಿಬಾ ಫುಲೆ ಜಯಂತಿ: ಶಿಕ್ಷಕ ದಂಪತಿಗಳಿಂದ ಜಾಥಾ, ಬುದ್ಧ ಬಸವ ಬಾಬಾಸಾಹೇಬ ಅಂಬೇಡ್ಕರ್ ಪುಸ್ತಕ ಮೇಳ



**ಬೆಳಗಾವಿ ವಾರ್ತೆ ವಿಜಯಪುರ:** ನಗರದ ದರಾಬಾರ್ ಪ್ರೌಢ ಶಾಲೆ ಮೈದಾನದಲ್ಲಿ ಮೇ ಸಾಹಿತ್ಯ ಮೇಳ ವಿಜಯಪುರ ಬಳಗ ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಆಶ್ರಯದಲ್ಲಿ ಏಪ್ರಿಲ್ 10ರಿಂದ 14ರ ವರೆಗೆ 5ದಿನಗಳ ಕಾಲ ಹಮ್ಮಿಕೊಂಡಿರುವ ಬಿಜಾಪುರ ಬುದ್ಧ, ಬಸವ, ಬಾಬಾಸಾಹೇಬ ಅಂಬೇಡ್ಕರ್ ಪುಸ್ತಕ ಮೇಳದಲ್ಲಿ ಎರಡನೇ ದಿನ ಮಹಾತ್ಮಾ ಜ್ಯೋತಿಬಾ ಫುಲೆ ಜಯಂತಿ ಅಂಗವಾಗಿ ನಗರದ ಸಾವಿತ್ರಿಬಾಯಿ ಫುಲೆ ಮಾರ್ಗದಿಂದ ಪುಸ್ತಕ ಮೇಳದ ಸ್ಥಳದ ವರೆಗೆ ಶಿಕ್ಷಕ ದಂಪತಿಗಳ ಜಾಥಾ ಜರುಗಿತು.

ಶಿಕ್ಷಕ ದಂಪತಿಗಳ ಜಾಥಾಕ್ಕೆ ಎಸ್ ಸಿ ಎಸ್ ಟಿ ನೌಕರರ ಸಮನ್ವಯ ಸಮಿತಿ ಅಧ್ಯಕ್ಷ ಬಿ.ಎಚ್. ನಾಡಗಿರಿ, ಪ್ರಧಾನ ಕಾರ್ಯದರ್ಶಿ ಸೂರ್ಯಕಾಂತ ಹೊಸಮನಿ, ಹೊನಮಲ್ಲಗೌಡ ಸಾರವಾಡ, ಎಸ್. ಎಂ. ಡೋಣಿ, ಆಶಾ ಕಟ್ಟಿಮನಿ, ನೀಲಾಂಬಿಕಾ ಬಿರಾದಾರ, ರಶ್ಮಿ ಗುಣಕಿ, ವಿಜಯಶ್ರೀ ಬಿಜಾಪುರ, ಹನಮಂತ ಮಮದಾಪುರ, ಸಲೀಂ ಕಲಾದಗಿ ಚಾಲನೆ ನೀಡಿದರು. ಜಾಥಾದಲ್ಲಿ ಬುದ್ಧ ಬಸವ, ಬಾಬಾಸಾಹೇಬ ಅಂಬೇಡ್ಕರ್ ಮತ್ತು ದೇಶದ ಮೊದಲ ಶಿಕ್ಷಕ ದಂಪತಿಗಳಾದ ಸಾವಿತ್ರಿಬಾಯಿ ಫುಲೆ ಮತ್ತು ಜ್ಯೋತಿಬಾ ಫುಲೆ ದಂಪತಿಗಳಿಗೆ ಜಯಘೋಷ ಮೊಳಗಿದವು.

ಶಿಕ್ಷಕ ದಂಪತಿಗಳ ಜಾಥಾದಲ್ಲಿ ದ್ರೌಪತಿ ನಾಗರಾಜ ಹೊನಸೂರೆ, ಶೋಭಾ ಮಲ್ಲಿಕಾರ್ಜುನ ಕನ್ನೂರ, ಸಾವಿತ್ರಿ ದೇವರಾಜ ಶೃಂಗೇರಿ, ಸಾವಿತ್ರಿ ಗಣಪತಿ ಚವ್ಹಾಣ, ರೇಣುಕಾ ಶಿವಪ್ಪ ಚಲವಾದಿ, ಜಯಶ್ರೀ ಸಿದ್ರಾಮಪ್ಪ ತದ್ದೇವಾಡಿ, ನೇತ್ರಾವತಿ ವಿಶ್ವನಾಥ ಮೇತ್ರಿ, ಶಿಲ್ಪಶ್ರೀ ನಿಜು ಮೇಲಿನಕೇರಿ, ವೈಶಾಲಿ ವಿಜಯಾನಂದ ಮುದ್ದೇಬಿಹಾಳ, ವಿಜಯಲಕ್ಷ್ಮಿ ಜಗದೀಶ ಹುಲ್ಯಾಳ, ಎಲ್ ಟಿ ಕೊಣ್ಣೂರ, ಎಸ್.ಎ. ಬಿರಾದಾರ, ಎಸ್.ಎಸ್. ಕುಲಕರ್ಣಿ, ಕೆ.ಎಚ್. ಪೂಜಾರಿ ಶಿಕ್ಷಕ ದಂಪತಿಗಳು ಭಾಗವಹಿಸಿದ್ದರು.

# ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಹಸಿರುಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನರಾಂ ಅವರ ಜಯಂತಿ

ಗದಗ: ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನರಾಂರವರ 119ನೇ ಹಾಗೂ ಸಂವಿಧಾನ ಶಿಲ್ಪಿ ಭಾರತರತ್ನ ಡಾ. ಬಿ.ಆರ್.ಅಂಬೇಡ್ಕರರವರ 135ನೇ ಜಯಂತಿಯನ್ನು ದಿ.14 ರಂದು ಬೆಳಿಗ್ಗೆ 9.00 ಗಂಟೆಗೆ ಲಕ್ಷ್ಮೇಶ್ವರ ಪಟ್ಟಣದ ತೇರಿನ ಮನೆಯಿಂದ ಕಲಾತಂಡದೊಂದಿಗೆ ಮೇರವಣಿಗೆ ಪ್ರಾರಂಭಿಸಿ ಭಾರತ್ನರತ್ನ ಡಾ: ಬಿ.ಆರ್. ಅಂಬೇಡ್ಕರ ಸರ್ಕಲ್, ಶಿಗ್ಲಿ ನಾಕಾ, ಪಾದಗಟ್ಟಿ, ಹಾವಳಿ ಆಂಜನೆಯದೇವಸ್ಥಾನ, ವಿದ್ಯಾರಣ್ಯ ಸರ್ಕಲ್ ಮಾರ್ಗವಾಗಿಚೆನ್ನಮ್ಮನ ವನದಲ್ಲಿವೇದಿಕೆ ಕಾರ್ಯಕ್ರಮ ಆಚರಿಸಲಾಗುತ್ತಿದೆ. ಸದರಿ ಕಾರ್ಯಕ್ರಮಕ್ಕೆ ಎಲ್ಲ ಗಣ್ಯ ಮಾನ್ಯರು, ದಲಿತ ಸಂಘರ್ಷ ಸಮಿತಿಯ ಸದಸ್ಯರು, ಸಾರ್ವಜನಿಕರು, ಅಧಿಕಾರಿ & ಸಿಬ್ಬಂದಿಗಳು ಎಲ್ಲರೂ ಮೆರವಣಿಗೆ & ವೇದಿಕೆ ಕಾರ್ಯಕ್ರಮಕ್ಕೆ ಹಾಜರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಶಿರಹಟ್ಟಿ ಇವರು ತಿಳಿಸಿದ್ದಾರೆ.

# ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ದೊಡ್ಡದು

**ಬೆಳಗಾವಿ ವಾರ್ತೆ ತಾಳಿಕೋಟೆ:** ಆರ್ಥಿಕವಾಗಿ ಸ್ವಾವಲಂಬಿಯಾಗಿ ಬದುಕುವದರಲ್ಲಿ ಮಹಿಳೆಯು ಮೊದಲಿಗಳಾಗಿ ಗುರುತಿಸಿಕೊಂಡು ಮುನ್ನಡೆ ಸಾದಿಸಿದ್ದಾಳೆ ಅಡುಗೆಯ ಮನೆಯಿಂದ ಹಿಡಿದು ದೇಶದ ಅತ್ಯುನ್ನತ ಹುದ್ದೆ ರಾಷ್ಟ್ರಪತಿ ಹುದ್ದೆಯವರೆಗೂ ಬೆಳೆದು ನಿಂತಿದ್ದಾಳೆಂದು ಎಸ್. ಕೆ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯದ ಉಪನ್ಯಾಸಕಿ ದೀಪಾ ಮಾಳಗೆ ಅವರು ಹೇಳಿದರು.

ಪಟ್ಟಣದ ಎಸ್.ಕೆ. ಶಿಕ್ಷಣ ಮಹಾವಿದ್ಯಾಲಯದ ವತಿಯಿಂದ ಆಶ್ರಯ ಕಾಲೋನಿಯಲ್ಲಿ ಆಯೋಜಿಸಲಾದ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ವಿಶೇಷ ಶಿಬಿರವು ಐದನೇ ದಿನದ ಶುಕ್ರವಾರರಂದು "ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ ಎಂಬ ವಿಷಯ ಕುರಿತು ಮಾತನಾಡುತ್ತಿದ್ದ ಅವರು ನಾರಿ ಅಡುಗೆ ಮನೆಯ ಅಬಲೆ ಯಲ್ಲ ಈಗ ದೇಶದ ಪ್ರಗತಿಯ ಮುಖ್ಯ ಪಾತ್ರವಾಗಿದ್ದಾಳೆ ಮಹಿಳಾ ಸಬಲೀಕರಣ ಕೇವಲ ಹೇಳಿಕೆಯಾಗಿ ಉಳಿಯದೆ ಕಾರ್ಯರೂಪಕ್ಕೆ ಬರಬೇಕು ಸಬಲ ನಾರಿಯು ದೇಶದ ಪ್ರಗತಿಯ ಮೆಟ್ಟಿಲಾಗುತ್ತಾರೆಂದರು.

ವೀ.ವಿ.ಸಂಘದ ನಿರ್ದೇಶಕರಾದ ಪ್ರಭುಗೌಡ ಮದರಕಲ್ ಅವರು ಮಾತನಾಡಿ ಆರ್ಥಿಕ ಬೆಳವಣಿಗೆ ಎನ್ನುವುದು ಮಹಿಳೆ ಮತ್ತು ಪುರುಷರೆನ್ನುವ ಭೇದವಿಲ್ಲ ಅದು ಶ್ರಮದ ಫಲವೆಂದು ಮಾರ್ಗದರ್ಶನ ನೀಡಿದರು.

ಕಾರ್ಯಕ್ರಮದ ಮಾರ್ಗದರ್ಶಕರು ಹಾಗೂ ಉಪನ್ಯಾಸಕರಾದ ಎಂ ಎ ಪೋತದಾರ ಅವರು, ಮಹಿಳೆಯರನ್ನ ಪೂಜನೀಯವಾಗಿ ಕಾಣುವುದಲ್ಲದೆ ಅವರಿಗೆ ಎಲ್ಲ ಕ್ಷೇತ್ರಗಳಲ್ಲಿ ಅವಕಾಶ ಕಲ್ಪಿಸುವುದರಿಂದ ರಾಷ್ಟ್ರವನ್ನು ಆರ್ಥಿಕವಾಗಿ ಸದೃಢಗೊಳಿಸ ಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಶಿಬಿರದ ಅಂಗವಾಗಿ ಮುಂಜಾನೆ ಎನ್.ಎಸ್.ಎಸ್ ಗೀತೆಯ ಗಾಯನ ಹಾಗೂ ಯೋಗಾಭ್ಯಾಸ ನಡೆಸಲಾಯಿತು. ಬಳಿಕ ವಿದ್ಯಾರ್ಥಿಗಳು ನಗರದ ಆಶ್ರಯ ಕಾಲೋನಿ ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛಗೊಳಿಸುವ ಮೂಲಕ ಶ್ರಮದಾನದಲ್ಲಿ ತೊಡಗಿಸಿಕೊಂಡರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಉಪನ್ಯಾಸಕರಾದ ಯು.ಎನ್.ಮಂಗೊಂಡ ಅವರು ಮಾತನಾಡಿ, ನಿಸ್ವಾರ್ಥವಾಗಿ ಸಮಾಜದ ಏಳಿಗೆಗೆ ದುಡಿಯುವಳು ಮಹಿಳೆ ಎಂದು ಮಹಿಳೆಯ ಪಾತ್ರ ವಿವರಿಸಿದರು. ಕಾರ್ಯಕ್ರಮದಲ್ಲಿ ಎಸ್.ಕೆ.ಸಂಯುಕ್ತ ಪ್ರೌಢ ಶಾಲೆಯ ಅಧ್ಯಕ್ಷ ಎಮ್. ಜಿ.ಕತ್ತಿ ಅವರು ಉಪಸ್ಥಿತರಿದ್ದರು.

ಪ್ರಶಿಕ್ಷಣಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಕೂಡ ಹಮ್ಮಿಕೊಳ್ಳಲಾಯಿತು.

ಈ ಸಂದರ್ಭದಲ್ಲಿ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಾಧಿಕಾರಿಗಳಾದ ಎ.ಎ. ಗಂಗನಗೌಡರ, ಕಾರ್ಯದರ್ಶಿಗಳಾದ ರೇಷ್ಮಾ ಚಲವಾದಿ, ಪ್ರಥಮ ವರ್ಷದ ವರ್ಗ ಮಹಿಳಾ ಪ್ರತಿನಿಧಿ ಮಧು ನಾಡಗೌಡ ಹಾಗೂ ಎನ್.ಎಸ್.ಎಸ್ ಶಿಬಿರಾರ್ಥಿಗಳು ಮತ್ತು ಮಹಾವಿದ್ಯಾಲಯದ ಸರ್ವ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸೂರಮ್ಮ ಮತ್ತು ತಂಡ ಪ್ರಾರ್ಥನೆ ನೆರವೇರಿಸಿದರು. ಶ್ವೇತ ತಂಡ ಎನ್.ಎಸ್.ಎಸ್ ಗೀತೆಯನ್ನು ಹಾಡಿದರು. ಐಶ್ವರ್ಯ ದೊಡಮನಿ ಸ್ವಾಗತಿಸಿ ಪರಿಚಯಿಸಿದರು. ಅನ್ನಪೂರ್ಣ ಪುಷ್ಪಾರ್ಪಣೆ ನೆರವೇರಿಸಿದರು.

# ದೇಶದ ಯೋಜನೆಗಳಿಗೆ ಜನಗಣತಿ ಆಧಾರ: ಪ.ಪಂ ಮುಖ್ಯಾಧಿಕಾರಿ ವೀರೇಶ ಹಟ್ಟಿ




**ಬೆಳಗಾವಿ ವಾರ್ತೆ ಕೊಲ್ಹಾರ:** ಭಾರತದ ಜನಗಣತಿ 2027 ಡಿಜಿಟಲೀಕರಣವಾಗಿದ್ದು. ಅದನ್ನು ಮೊಬೈಲ್ ಮೂಲಕ ಬಹಳ ಸರಳವಾಗಿ ಮಾಡಬಹುದು . ಅದನ್ನು ಯಾರು ಗೊಂದಲ ಮಾಡಿಕೊಳ್ಳದೆ 2026ರ ಮೊದಲನೆ ಹಂತದ ಮನೆಪಟ್ಟಿ ಹಾಗೂ ಮನೆ ಗಣತಿಯನ್ನು ಯಶಸ್ವಿಗೊಳಿಸಬೇಕೆಂದು ತಹಸೀಲ್ದಾರ ಸಂತೋಷ ಮ್ಯಾಗೇರಿ ಹೇಳಿದರು.

ಪಟ್ಟಣದ ಸರ್ಕಾರಿ ಪಾಲ್ ಟೆಕ್ನಿಕ್ ಕಾಲೇಜಿನಲ್ಲಿ ತಾಲೂಕು ಆಡಳಿತ ಹಾಗೂ ಪಟ್ಟಣ ಪಂಚಾಯತಿ ಸಹಯೋಗದಲ್ಲಿ ಹಮ್ಮಿಕೊಂಡ ಗಣತಿದಾರರು ಹಾಗೂ ಗಣತಿದಾರರ ಮೇಲ್ವಿಚಾರಕರ 3 ದಿನಗಳ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

2021ರಲ್ಲಿ ಆಗಬೇಕಾದ ರಾಷ್ಟ್ರೀಯ ಜನಗಣತಿ ಕೋವಿಡ್ ಕಾರಣದಿಂದ ತೊಂದರೆಯಾಗಿ ಈ ವರ್ಷದಿಂದ ಮತ್ತೆ ಗಣತಿ ಪ್ರಾರಂಭವಾಗಿದೆ. ಗಣತಿಯು ಎ 16 ರಿಂದ ಮೇ 15 ರವರೆಗೆ ನಡೆಯುತ್ತದೆ. ಈ ವೇಳೆ ಯಾರು ಗಣತಿ ಬಗ್ಗೆ ಭಯ ಪಡದೆ ಎಲ್ಲರೂ ಹುರುಪಿನಿಂದ ಗಣತಿ ಮಾಡಿ ಮನೆ ಪಟ್ಟಿ ಹಾಗೂ ಏರಿಯಾ ಮ್ಯಾಪ್ ನ್ನು ಸಿದ್ಧಪಡಿಸಿಕೊಳ್ಳಬೇಕು. ಇಡೀ ಜಿಲ್ಲೆಯಲ್ಲಿ ಕೊಲ್ಹಾರ ತಾಲೂಕಿನ ಗಣತಿ ಕಾರ್ಯ ಮೊದಲು ಬೇಗ ಮುಗಿಬೇಕು ಅದಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ವಿನಂತಿಸಿದರು. ಗಣತಿದಾರರಿಗೆ ಗಣತಿ ಸಂದರ್ಭದಲ್ಲಿ ಏನಾದರೂ ಸಮಸ್ಯೆ, ತೊಂದರೆಗಳಾದರೆ ಗಣತಿ ಮೇಲ್ವಿಚಾರಕರಿಗೆ, ಚಾರ್ಜ್ ಅಧಿಕಾರಿಗಳ ಗಮನಕ್ಕೆ ತಂದು ಪರಿಹಾರ ಕಂಡುಕೊಳ್ಳಬೇಕು ಎಂದು ಸಲಹೆ ನೀಡಿದರು.

ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ವೀರೇಶ ಹಟ್ಟಿ ಮಾತನಾಡಿದರು, ಜನಗಣತಿ 2027 ಸರ್ಕಾರಿ ಕಾರ್ಯಕ್ರಮವಾಗಿದ್ದು ಇದರ ಮೂಲಕ ದೇಶದಲ್ಲಿ ಯೋಜನೆಗಳು, ಸೌಲಭ್ಯಗಳು ಹಾಗೂ ಜನಸಂಖ್ಯೆ ಆಧಾರದ ಮೇಲೆ ವಿಧಾನ ಸಭೆ, ಲೋಕಸಭೆ ಕ್ಷೇತ್ರಗಳು ಮರುವಿಂಗಡಣೆಯಾಗಲಿವೆ ಕಾರಣ ಎಲ್ಲ ಗಣತಿದಾರರು ಮನೆ ಮನೆಗೆ ತೆರಳಿ ನಿಖರವಾಗಿ ಮನೆ ಪಟ್ಟಿ ಮಾಡಿ ಸರಿಯಾದ ಮಾಹಿತಿಯನ್ನು ಕೊಡಬೇಕು ಎಂದರು.

ಈ ವೇಳೆ ಸರ್ಕಾರಿ ಪಾಲ್ ಟೆಕ್ನಿಕ್ ಕಾಲೇಜಿನ ಪ್ರಿನ್ಸಿಪಾಲ್ ಎಂ ಬಿ ಗರಸಂಗಿ ಅತಿಥಿಯಾಗಿ ಭಾಗವಹಿಸಿದ್ದರು.

ಮಾಸ್ಟರ್ ಟ್ರೈನರ್ ಶಿಕ್ಷಕ ಸಂಗಮೇಶ ಕಮತಗಿ ಹಾಗೂ ಕಂಠಿ ಯವರು ಗಣತಿ ತರಬೇತಿಯನ್ನು ನೀಡಿದರು. ಕೊಲ್ಹಾರ ಪಟ್ಟಣ ಹಾಗೂ ಸುತ್ತ ಮುತ್ತಲಿನ ಗ್ರಾಮಗಳ ಗಣತಿದಾರ ಹಾಗೂ ಮೇಲ್ವಿಚಾರಕರ ತರಬೇತಿಗಳು ಸರ್ಕಾರಿ ಪ್ರೌಢ ಶಾಲೆ ಹಾಗೂ ಸರ್ಕಾರಿ ಪಾಲ್ ಟೆಕ್ನಿಕ್ ಕಾಲೇಜಿನಲ್ಲಿ ಜರುಗಿದವು.

# ಬೆಳಗಾವಿಯಲ್ಲಿ ಲೋಕಾಯುಕ್ತ ದಾಳಿ: ಕೋಟಿ ಕೋಟಿ ಆಸ್ತಿ ಪತ್ತೆ; ದಿನಗೂಲಿ ನೌಕರನೊಬ್ಬ ಕುಬೇರನಾದ ಕಥೆ ಇದು!



**ಬೆಳಗಾವಿ ವಾರ್ತೆ ಬೆಳಗಾವಿ:** ಬೆಳಗಾವಿಯಲ್ಲಿ ಜಿಲ್ಲಾ ನಗರಾಭಿವೃದ್ಧಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ (ಎಇಇ) ಮನೆ ಮೇಲೆ ಲೋಕಾಯುಕ್ತರು ಅಧಿಕಾರಿಗಳು ದಾಳಿ ನಡೆಸಿದ್ದು, ಚಿನ್ನ, ಬೆಳ್ಳಿ, ಬ್ಯಾಂಕ್ ಠೇವಣಿ ಮತ್ತು ಆಸ್ತಿ ಸೇರಿದಂತೆ 14 ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ಅಕ್ರಮ ಆಸ್ತಿ ಪತ್ತೆಯಾ ಗಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ. ಜಿಲ್ಲಾ ನಗರಾಭಿವೃದ್ಧಿ ಕೋಶದ (ಡಿಯುಡಿಸಿ) ಎಇಇ ಅಜಯ್‌ಸಿಂಗ್ ಬಾಪುಸಿಂಗ್ ರಾಜಾಪುರ ಅವರ ಮನೆಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಶುಕ್ರವಾರ ರಾಜಾಪುರ ಅವರ ಮನೆ, ಕಚೇರಿ ಮತ್ತು ಬ್ಯಾಂಕ್ ಸೇರಿದಂತೆ ಏಳು ಸ್ಥಳಗಳಲ್ಲಿ ಲೋಕಾಯುಕ್ತ ಅಧಿಕಾರಿಗಳು ಏಕಕಾಲದಲ್ಲಿ ದಾಳಿ ನಡೆಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾರ್ಯಾಚರಣೆಯ ಸಮಯದಲ್ಲಿ, ಅಧಿಕಾರಿಗಳು ಬೆಳಗಾವಿಯಲ್ಲಿ ಮೂರು ಮನೆಗಳು, ಒಂದು ಕಚೇರಿ ಮತ್ತು ಬ್ಯಾಂಕ್ ಲಾಕರ್ ಅನ್ನು ಪರಿಶೀಲಿಸಿದ್ದಾರೆ. ಈ ವೇಳೆ ಸವದತ್ತಿ, ಹುಕ್ಕೇರಿ, ಹುಬ್ಬಳ್ಳಿ ಯಲ್ಲಿ 18 ನಿವೇಶನ ಪತ್ತೆಯಾಗಿದ್ದರೆ ಮನೆಯಲ್ಲಿ 5.96 ಕೆಜಿ ಮೌಲ್ಯದ ಚಿನ್ನ, 5 ಕೆಜಿ ಬೆಳ್ಳಿ, 3.12 ಕೋಟಿ ಡೆಪಾಸಿಟ್, ಐಷಾರಾಮಿ ಕಾರು, ಬೈಕ್‌ಗಳು ಪತ್ತೆಯಾಗಿವೆ.

ಅಧಿಕಾರಿಗಳ ಪ್ರಕಾರ, ವಶಪಡಿಸಿಕೊಂಡ ಆಸ್ತಿಗಳಲ್ಲಿ 5.96 ಕೆಜಿ ಚಿನ್ನ, 5 ಕೆಜಿ ಬೆಳ್ಳಿ, 3.12 ಕೋಟಿ ರೂ. ಬ್ಯಾಂಕ್ ಠೇವಣಿ ಮತ್ತು ಐಷಾರಾಮಿ ಕಾರುಗಳು ಮತ್ತು ಬೈಕ್‌ಗಳು ಸೇರಿವೆ.

ಒಟ್ಟಾರೆಯಾಗಿ, ಇಲ್ಲಿಯವರೆಗೆ 14 ಕೋಟಿ ರೂ.ಗೂ ಹೆಚ್ಚು ಮೌಲ್ಯದ ಚರ ಮತ್ತು ಸ್ಥಿರ ಆಸ್ತಿಗಳು ಪತ್ತೆಯಾಗಿವೆ.

ಅಧಿಕಾರಿಯ ವಿರುದ್ಧ ಆದಾಯಕ್ಕೆ ಮೀರಿದ ಆಸ್ತಿ ಹೊಂದಿದ್ದಕ್ಕಾಗಿ ಭ್ರಷ್ಟಾಚಾರ ತಡೆ ಕಾಯ್ದೆಯ ನಿಬಂಧನೆಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಆದಾಯಕ್ಕೆ ಮೀರಿದ ಆಸ್ತಿಗಳ ಬಗ್ಗೆ ತನಿಖೆ ಮುಂದುವರೆದಿದೆ ಎಂದು ಲೋಕಾಯುಕ್ತರು ತಿಳಿಸಿದ್ದಾರೆ.

**ದಿನಗೂಲಿ ನೌಕರನೊಬ್ಬ ಕುಬೇರನಾದ ಕಥೆ:** ಮೂಲತಃ ಹುಕ್ಕೇರಿಯುವರಾದ ಅಜಯುಸಿಂಗ್ ಅವರು 1992ರಲ್ಲಿ ದಿನಗೂಲಿ ನೌಕರನಾಗಿ ಸೇವೆ ಆರಂಭಿಸಿದ್ದನು. 2006ರವರೆಗೂ ದಿನಗೂಲಿ ನೌಕರನಾಗಿಯೇ ಮುಂದುವರಿದಿದ್ದು, 2008ರಲ್ಲಿ ಸರ್ಕಾರ ಅವರ ಸೇವೆಯನ್ನು ಖಾಯಂಗೊಳಿಸಿತ್ತು. ಬಳಿಕ ಅಸಿಸ್ಟೆಂಟ್ ಇಂಜಿನಿಯರ್, ಜ್ಯೂನಿಯರ್ ಇಂಜಿನಿಯರ್ ಹೀಗೆ ಹಂತಹಂತವಾಗಿ ಬೆಳೆದ ಅಜಯಸಿಂಗ್ ಇದೀಗ ನಗರಾಭಿವೃದ್ಧಿ ಇಲಾಖೆ ಎಇಇ ಹುದ್ದೆವರೆಗೆ ಏರಿದ್ದಾರೆ. ಆದರೆ ಈ ಅವಧಿಯಲ್ಲಿ ಸುಳ್ಳು ಆದಾಯ ತೋರಿಸಿ ಕೋಟಿ ಕೋಟಿ ಅಕ್ರಮ ಆಸ್ತಿ ಸಂಪಾದನೆ ಮಾಡಿರುವ ಆರೋಪ ಅವರ ವಿರುದ್ಧ ಕೇಳಿಬಂದಿದೆ.

# ಏಪ್ರಿಲ್ 15ರಂದು ಮಂಡ್ಯಕ್ಕೆ ಪ್ರಧಾನಿ ಮೋದಿ ಭೇಟಿ; ಬಾಲಗಂಗಾಧರನಾಥ ಶ್ರೀಗಳ ಗದ್ದುಗೆ ಉದ್ಘಾಟನೆ



**ಬೆಳಗಾವಿ ವಾರ್ತೆ ಮಂಡ್ಯ:** ಪ್ರಧಾನಿ ನರೇಂದ್ರ ಮೋದಿ ಅವರು ಏಪ್ರಿಲ್ 15ರಂದು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಆದಿಚುಂಚನಗಿರಿ ಮಠಕ್ಕೆ ಭೇಟಿ ನೀಡುತ್ತಿದ್ದು, ಅಲ್ಲಿ ಬಾಲಗಂಗಾಧರನಾಥ ಶ್ರೀಗಳ ಗದ್ದುಗೆ ಉದ್ಘಾಟನೆ ಮಾಡಲಿದ್ದಾರೆ.

ಪ್ರಧಾನಿ ಮೋದಿ ಅವರು ಬುಧವಾರ ಬೆಳಗ್ಗೆ ಆದಿಚುಂಚನಗಿರಿಗೆ ರಸ್ತೆ ಮೂಲಕ ಪ್ರಯಾಣಿಸಲಿದ್ದು, 11 ಗಂಟೆಗೆ ಹೊಸದಾಗಿ ನಿರ್ಮಿಸಲಾಗಿರುವ ಶ್ರೀ ಗುರು ಭೈರವೈಕ್ಯ ಬಾಲಗಂಗಾಧರನಾಥ ಸ್ವಾಮೀಜಿ ಮಂದಿರವನ್ನು ಉದ್ಘಾಟಿಸಲಿದ್ದಾರೆ. ನಂತರ ಕೇರಳಕ್ಕೆ ಪ್ರಯಾಣಿಸಲಿದ್ದಾರೆ.

ದೆಹಲಿಯಿಂದ ಹೊರಟು ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಆಗಮಿಸಲಿರುವ ಮೋದಿ, ಅಲ್ಲಿಂದ ಹೆಲಿಕಾಪ್ಟರ್ ಮೂಲಕ ಆದಿಚುಂಚನಗಿರಿ ಹೆಲಿಪ್ಯಾಡ್‌ಗೆ ಸುಮಾರು 10:50ಕ್ಕೆ ತಲುಪಲಿದ್ದಾರೆ. ಬಳಿಕ ರಸ್ತೆ ಮಾರ್ಗವಾಗಿ ಮಠಕ್ಕೆ ತೆರಳಿ, ಬೆಳಗ್ಗೆ 11 ಗಂಟೆಗೆ ಮಾಜಿ ಪೀಠಾಧಿಪತಿ ಬಾಲಗಂಗಾಧರನಾಥ ಸ್ವಾಮಿ ಅವರ ನೂತನ ಗದ್ದಿಗೆ (ಮಂದಿರ) ಉದ್ಘಾಟನೆ ನೆರವೇರಿಸಲಿದ್ದಾರೆ.

ನಂತರ BGS ಮೈದಾನದಲ್ಲಿ ಸಾರ್ವಜನಿಕ ಕಾರ್ಯಕ್ರಮ ನಡೆಯಲಿದ್ದು, ಸಾವಿರಾರು ಭಕ್ತರು ಭಾಗವಹಿಸುವ ನಿರೀಕ್ಷೆಯಿದೆ. ಕಾರ್ಯಕ್ರಮದ ನಂತರ ಪ್ರಧಾನಿ ಮೋದಿ ಅವರು ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಮರಳಿ ಅಲ್ಲಿಂದ ಕೇರಳಕ್ಕೆ ಪ್ರಯಾಣ ಮುಂದುವರಿಸಲಿದ್ದಾರೆ.

# ಮಂಗಳೂರು: ದ್ವಿತೀಯ PUC ಪರೀಕ್ಷೆಯಲ್ಲಿ ತಂದೆ– ಮಗ ಇಬ್ಬರು ತೇರ್ಗಡೆ!

**ಬೆಳಗಾವಿ ವಾರ್ತೆ ಮಂಗಳೂರು:** ವಿದ್ಯೆಗೆ ವಯಸ್ಸಿನ ಅಂತರವಿಲ್ಲ. ಕಲಿಯುವ ಆಸಕ್ತಿಯಿದ್ದರೆ ಯಾವ ವಯಸ್ಸಿನಲ್ಲಿಯೂ ಕಲಿಯಬಹು ದು ಎಂಬುದಕ್ಕೆ ಮಂಗಳೂರಿನ ತಂದೆ– ಮಗ ಸಾಕ್ಷಿಯಾಗಿದ್ದಾರೆ. ಕೊಲ್ಯದ 57 ವರ್ಷದ ವ್ಯಕ್ತಿಯೊಬ್ಬರು ತಮ್ಮ ಮಗ ಕ್ಷಿತಿಜ್ ರಾಜ್ ಅವರೊಂದಿಗೆ ದ್ವಿತೀಯ ಪಿಯುಸಿ ಬೋರ್ಡ್ ಪರೀಕ್ಷೆಯಲ್ಲಿ ಶೇ.52 ರಷ್ಟು ಅಂಕಗಳನ್ನು ಪಡೆದು ಯಶಸ್ವಿಯಾಗಿ ತೇರ್ಗಡೆಯಾಗಿದ್ದಾರೆ.

ಚಿಟ್ ಫಂಡ್ ವ್ಯವಹಾರದಲ್ಲಿ ಕೆಲಸ ಮಾಡುತ್ತಿರುವ ಮೋಹನ್ ರಾಜ್ ಸುಮಾರು ನಾಲ್ಕು ದಶಕಗಳ ಹಿಂದೆ ಪ್ರಥಮ ಪಿಯುಸಿ ಮುಗಿಸಿದ್ದರು. ಆದರೆ, ಹಣಕಾಸಿನ ತೊಂದರೆ ಮತ್ತು ಕೌಟುಂಬಿಕ ಜವಾಬ್ದಾರಿಗಳಿಂದಾಗಿ ಅವರು ಆ ಸಮಯದಲ್ಲಿ ಶಿಕ್ಷಣವನ್ನು ಮುಂದುವರಿಸಲು ಸಾಧ್ಯವಾಗಿರಲಿಲ್ಲ.

ತನ್ನ ಅಧ್ಯಯನವನ್ನು ಪೂರ್ಣಗೊಳಿಸದ ಪಶ್ಚಾತ್ತಾಪ ಅನೇಕ ವರ್ಷಗಳಿಂದ ಅವರನ್ನು ಕಾಡುತಿತ್ತು. ಅವರ ಮಗ ಪಿಯುಸಿ ಪರೀಕ್ಷೆಗೆ ತಯಾರಿ ಆರಂಭಿಸಿದಾಗ ತನ್ನ ದೀರ್ಘಾವಧಿಯ ಶೈಕ್ಷಣಿಕ ಗುರಿ ಸಾಧಿಸಲು ಮತ್ತೊಂದು ಅವಕಾಶ ಪಡೆಯಲು ನಿರ್ಧರಿಸಿದರು. ಒಟ್ಟಿಗೆ ಓದುವುದರಿಂದ ಮಗನಿಗೆ ಪ್ರೋತ್ಸಾಹ ಮತ್ತು ಬೆಂಬಲ ಸಿಗುತ್ತದೆ ಎಂಬುದು ಅವರ ನಂಬಿಕೆಯಾಗಿತ್ತು. ಮಗನು ಪರೀಕ್ಷೆಗೆ ತಯಾರಿ ನಡೆಸುತ್ತಿರುವುದನ್ನು ನೋಡಿ ನನಗೆ ಸ್ಫೂರ್ತಿಯಾಯಿತು. ನನಗಾಗಿ ಮಾತ್ರವಲ್ಲ ದೆ ಆತನನ್ನು ಪ್ರೇರೇಪಿಸಲು ದ್ವಿತೀಯ ಪಿಯುಸಿಗೆ ಹಾಜರಾಗಲು ನಿರ್ಧರಿಸಿದೆ ಎಂದು ಮೋಹನ್ ಹೇಳಿದರು. ಕೆಲಸ ಮತ್ತು ಅಧ್ಯಯನವನ್ನು ನಿಭಾಯಿಸುತ್ತಾ, ಮೋಹನ್ ತೊಕ್ಕೊಟ್ಟುವಿನ ಮಠದಲ್ಲಿ ಟ್ಯುಟೋರಿಯಲ್ ಮತ್ತು ಕಂಪ್ಯೂಟರ್ ಸೆಂಟರ್‌ಗೆ ಸೇರಿಕೊಂಡರು.

ಅಲ್ಲಿ ಅವರು ಪ್ರತಿದಿನ ಬೆಳಿಗ್ಗೆ 8 ರಿಂದ 11 ರವರೆಗೆ ಮತ್ತು ಮಧ್ಯಾಹ್ನ 2.30 ರಿಂದ ಸಂಜೆ 4 ರವರೆಗೆ ತರಗತಿಗಳಿಗೆ ಹಾಜರಾಗಿದ್ದರು. ಅವರ ಮಕ್ಕಳಾದ ಪೃಥ್ವಿ, ಪ್ರಕೃತಿ ಮತ್ತು ಕ್ಷಿತಿಜ್ ರಾಜ್ ತಂದೆಗೆ



ನೆರವಾಗಿದ್ದಾರೆ.

40 ವರ್ಷಗಳ ನಂತರ ಶಿಕ್ಷಣಕ್ಕೆ ಮರಳುವುದು ಸುಲಭವಲ್ಲ ಎಂಬುದನ್ನು ಒಪ್ಪಿಕೊಂಡ ಮೋಹನ್ ರಾಜ್, ಬರವಣಿಗೆ ಮತ್ತು ಅಧ್ಯಯನದ ಸಂಪರ್ಕ ಕಳೆದುಕೊಂಡ್ದೆ. ಹೀಗಾಗಿ ಸಮಯಕ್ಕೆ ಪೇಪರ್‌ಗಳ 'ನ್ನು ಪೂರ್ಣಗೊಳಿಸುವುದು ಸವಾಲಾಗಿತ್ತು" ಎಂದು ಅವರು ಹೇಳಿದರು.

ಕಲಾ ವಿಭಾಗದಲ್ಲಿ ಶೇ.52ರಷ್ಟು ಅಂಕಗಳಿಸಿ ಮೊದಲ ಪ್ರಯತ್ನದಲ್ಲೇ ಎಲ್ಲ ವಿಷಯಗಳಲ್ಲಿ ಉತ್ತೀರ್ಣರಾದ ಮೋಹನ್ ರಾಜ್ ಅವರ ಶ್ರಮಕ್ಕೆ ತಕ್ಕ ಫಲ ದೊರೆಯಿತು. ಈ ಮಧ್ಯೆ ಅವರ ಮಗ ವಾಣಿಜ್ಯ ವಿಭಾಗದಲ್ಲಿ ಶೇ. 67 ರಷ್ಟು ಅಂಕಗಳನ್ನು ಗಳಿಸಿದ್ದಾರೆ. ಮೋಹನ್ ಈಗ ಪತ್ರವ್ಯವಹಾರದ ಮೂಲಕ ಕಾನೂನು ಅಧ್ಯಯನ ಮಾಡುವ ತನ್ನ ಬಹುಕಾಲದ ಕನಸನ್ನು ಮುಂದುವರಿಸಲು ಬಯಸಿದ್ದಾರೆ.



ಗದಗನ ಎಪಿಜೆ ಅಬ್ದುಲ್ ಕಲಾಂ ವಸತಿ ಶಾಲೆ ಯಲ್ಲಿ ಸ್ಥಳೀಯ ಅಲ್ಪಸಂಖ್ಯಾತರ ಕುಂದುಕೊರತೆ ವಿಚಾರಣೆ ಮತ್ತು ಅಲ್ಪಸಂಖ್ಯಾತ ಮಹಿಳೆಯರು ಮತ್ತು ಸ್ಥಳೀಯ ಮಹಿಳಾ ಅಧಿಕಾರೇತರ ಸಂಸ್ಥೆಗಳಿಗೆ ಸಾಕ್ಷರತೆಯನ್ನು ಪ್ರೇರೇಪಿಸಲು ಜಾಗೃತಿ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಅಲ್ಪ ಸಂಖ್ಯಾತರ ಆಯೋಗದ ಅಧ್ಯಕ್ಷ ಯು. ನಿಸಾರ್ ಅಹಮದ್ ಅವರು ಅಲ್ಪಸಂಖ್ಯಾತರ ಕುಂದುಕೊರತೆ ವಿಚಾರಿಸಿ ಅಹವಾಲು ಸ್ವೀಕರಿಸಿದರು. ಈ ಸಂದರ್ಭದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ ಅಮಿತ ಬಿದರಿ, ವಕ್ಫ ಬೋರ್ಡದ ಕೌಸಿಫ್ ಮಕಾನದಾರ, ಮುಜಾಬುಲ್ಲಾ ಜಾಫರ್ ಇತರರಿದ್ದರು.

# ಸೂಫಿಗಳು ಮತ್ತು ಶರಣರು ಸನ್ಮಾರ್ಗ ತೋರಿಸಿದರು: ಮಹೇಶ ಕ್ಯಾತನ



**ಬೆಳಗಾವಿ ವಾರ್ತೆ ವಿಜಯಪುರ:** ಸೂಫಿಗಳು ಹಾಗೂ ಶರಣರು ಬೇಧವಿಲ್ಲದೆ ಸನ್ಮಾರ್ಗ ತೋರಿಸಿದರು. ಹಿರಿಯರು ಧರ್ಮವಂತ ರಾಗಿದ್ದರು. ನೀತಿ. ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿದ ಸೂಫಿ ಸಂತರು. ಶರಣರು ಮಾನವ ಜನಾಂಗ ಸೌಹಾರ್ದದಿಂದ ಕೂಡಿ ಬಾಳಲು ಸಂದೇಶ ಸಾರಿದ್ದಾರೆಂದು ಅರಣ್ಯ ಇಲಾಖೆಯ ವಿಶ್ರಾಂತ ಅಧಿಕಾರಿ ಮಹೇಶ ಕ್ಯಾತನ ಅಭಿಪ್ರಾಯ ವ್ಯಕ್ತಪಡಿಸಿದರು.

ಶನಿವಾರ ಸಂಜೆ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ದತ್ತಿಗಳಾದ ಮ.ನಿ.ಪ್ರ ಗುರುಸಂಗನಬಸವ ಸ್ವಾಮಿಜಿ ದತ್ತಿ.ಸೈಯ್ಯದ ಅಹಮ್ಮದೀಯಾ ವಾರಿಸ ಮಿಯಾ ಖಾದ್ರಿ ಪೌಂಡೇಶನ ದತ್ತಿ. ಕಂದಾಯ ಇಲಾಖಾ ನೌಕರರ ಸಂಘ ವಿಜಯಪುರ ದತ್ತಿ. ಲಿಂ. ಬಸಪ್ಪ ಅಡಿವೆಪ್ಪ ಬಿಜ್ಜರಗಿ ದತ್ತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ನಾವೆಲ್ಲರೂ ಮಾನವರು. ಶುದ್ಧ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಸೂಫಿ ಸಂತರ ಹಾಗೂ ಶರಣರ ಕಾಯಕ. ತತ್ವಗಳನ್ನು ಪಾಲನೆಯಾಗಬೇಕು. ಸೂಫಿಗಳು ಹಾಗೂ ಶರಣರ ಚಿಂತನೆಗಳು ಕುರಿತು ಉಪನ್ಯಾಸ ನೀಡಿದ ಕವಿತಾ ಮುದಕವಿ ಸೂಫಿಗಳ ಹಾಗೂ ಶರಣರ ತತ್ವಗಳು ಸಾರ್ವಕಾಲಿಕ. ಹಾಗೂ ಹೋಲಿಕೆಯಾಗಿವೆ. ಯಾವುದೇ ಧಮ9ವು ಬೇಧವಿಲ್ಲದೆ ಮಾನವೀಯ ಸದ್ಗುಣಗಳಿಂದ ಕೂಡಿದೆ. ನಾವು ಶರಣರಾಗಲು ಸೂಫಿಗಳಾಗಲು ಸಾಧ್ಯವಿಲ್ಲ. ಆದರೆ ಅವರ ದಾರಿಯಲ್ಲಿ ಸಾಗೋಣ. ಮಕ್ಕಳಿಗೆ ದಾನ. ಧಮ9. ಸಂಸ್ಕಾರ ನೀಡುವ ಅವಶ್ಯಕತೆಯಿದೆ ಎಂದರು.

ಸಭೆಯ ಅಧ್ಯಕ್ಷ ವಹಿಸಿದ್ದ ವಿಶ್ರಾಂತ ಪ್ರಾಚಾರ್ಯ ಬಿ.ಎ. ಅಜೂರ ಮಾತನಾಡಿ, ಭಾವೈಕ್ಯತೆಯ ಜೀವನಕ್ಕೆ ಸೂಫಿಗಳು ಸಂತರು, ಶರಣರು ಅಮೂಲ್ಯವಾದ ಕೊಡುಗೆ ನೀಡಿದ್ದಾರೆ.

ಸಹೋದರತೆಯ ಪವಿತ್ರ ಬಾಂಧವ್ಯವನ್ನು ಗಟ್ಟಿಮಾಡುವ ಕಾಯಕ ಸಿದ್ಧಾಂತ ಮಾಡಿದರು. ಸರಕಾರಿ ನೌಕರರು ಕ್ರಿಯಾಶೀಲ ಚಟುವಟಿಕೆಗಳಿಂದ ಜನಸಾಮಾನ್ಯರಿಗೆ ಸೇವೆ ಸಲ್ಲಿಸಿ ಸ್ಮರಣೀಯರಾಗಬೇಕು ಎಂದರು.

ಸರಕಾರಿ ನೌಕರರ ಪಾರದರ್ಶಕ ಆಡಳಿತ ಕುರಿತು ಸರಕಾರಿ ಸೇವೆ ದೇವರ ಸೇವೆ ಎಂದು ಶ್ರದ್ಧೆಯಿಂದ ದುಡಿಯಬೇಕು.

ಸರಕಾರ ಖಾಲಿ ಇರುವ ಹುದ್ದೆಗಳನ್ನು ಬೇಗನೇ ತುಂಬಬೇಕು. ಸರಕಾರಿ ನೌಕರರು ಆತ್ಮಗೌರವದಿಂದ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಜನಸಾಮಾನ್ಯರ ಕೆಲಸವನ್ನು ಸರಕಾರಿ ನೌಕರರು ಸ್ಪಂದಿಸಿ ಕಾರ್ಯ ನಿರ್ವಹಿಸಬೇಕು. ಆಡಳಿತ ಭಾಷೆ ಕನ್ನಡದಲ್ಲಿ ಮಾತನಾಡುವ ಹಾಗೂ ಬರೆಯಬೇಕು. ಸರಕಾರಿ ಯೋಜನೆಗಳನ್ನು ನೌಕರರು ಜನಸಾಮಾನ್ಯರಿಗೆ ತಲುಪಿಸಬೇಕು. ಭೃಷ್ಟ ಅಧಿಕಾರಿಗಳಿಂದ ಪಾರದರ್ಶಕ ಆಡಳಿತ ನಿರೀಕ್ಷಿತ ಫಲ ದೊರೆಯುವುದು ಕಷ್ಟ ಸಾಧ್ಯ ಎಂದರು.

ಸರಕಾರಿ ಪ್ರೌಢ ಶಾಲೆ ನಂದರಗಿ ವಿಶ್ರಾಂತ ಮುಖ್ಯ ಅಧ್ಯಾಪಕ ಜಿ.ಕೆ. ಪಟ್ಟಣದ, ಸರಕಾರಿ ಪ್ರೌಢ ಶಾಲೆ ಬಿ.ಕೆ. ನಾದ, ಮುಖ್ಯ ಅಧ್ಯಾಪಕ ಬಿ.ವಿ. ಪಾಟೀಲ ಹಾಗೂ ಸರಕಾರಿ ಪ್ರೌಢ ಶಾಲೆ ವಿಶ್ರಾಂತ ಶಿಕ್ಷಕಿ ಶಾಂತಾಬಾಯಿ ಸುರಕೋಡ ಮಾತನಾಡಿದರು.

ಸುನಂದಾ ಕೋರಿ ಪ್ರಾರ್ಥಿಸಿದರು. ಜಯಶ್ರೀ ಹಿರೇಮಠ ಸ್ವಾಗತಿಸಿ ಗೌರವಿಸಿದರು. ಸಿದ್ದರಾಮ ಹತ್ತಳ್ಳಿ ನಿರೂಪಿಸಿದರು. ಶಿಲ್ಪಾ ಭಸ್ಮೆ ಪ್ರಾಸ್ತಾವಿಕ ಭಾಷಣ ಮಾಡಿದರು. ಶೋಭಾ ಬಡಿಗೇರ ವಂದಿಸಿದರು.

ಕಸಾಪ ಅಧ್ಯಕ್ಷ ಹಾಸಿಂಪೀರ ವಾಲಿಕಾರ, ಬಸವರಾಜ ಬಿರಾದಾರ, ಲತಾ ಗುಂಡಿ, ಗಂಗಮ್ಮ ರೆಡ್ಡಿ, ಮಲ್ಲಿಕಾರ್ಜುನ ಕೆಳಗಡೆ, ವೈ.ಎಸ್. ನಾದ, ಸುನಂದಾ ಅವಟಿ, ಕೆ. ಎಸ್. ಹಣಮಾಣಿ, ಜಿ.ಎಸ್. ಬಳ್ಳೂರ, ಸರೋಜಿನಿ ತಮಗೊಂಡ, ಬಸವರಾಜ ಬಿರಾದಾರ, ಆಶಾ ಬಿರಾದಾರ, ಆರ್.ಬಿ. ದಾನಿ, ಸಹನಾ ಬಿರಾದಾರ, ಬಸನಗೌಡ ಬಿರಾದಾರ, ಬಸವರಾಜ ಎಕ್ಸಂಬೆ, ಲಕ್ಷ್ಮಿ ಬಿರಾದಾರ ಮುಂತಾದವರು ಉಪಸ್ಥಿತರಿದ್ದರು.

# ಅವಟಿ ದಂಪತಿಗಳಿಗೆ ಸನ್ಮಾನ

**ಬೆಳಗಾವಿ ವಾರ್ತೆ ವಿಜಯಪುರ:** ದಾನೇಶ್ವರಿ ವಿವಿಧೋದ್ದೇಶಗಳ ಸಂಸ್ಥೆಯ ಸಿಸ್ಟರ್ ನಿವೇದಿತಾ ಪೂರ್ವ ಪ್ರಾಥಮಿಕ ಶಾಲೆ ಮಹಾತ್ಮಾ ಗಾಂಧಿ ನಗರ ವಿಜಯಪುರದ ಶಿಕ್ಷಕ ದಂಪತಿಗಳಾದ ನ್ಯಾಯವಾದಿ ದಾನೇಶ ಅವಟಿ ಹಾಗೂ ಮುಖ್ಯೋಪಾಧ್ಯಾಯಿನಿ ನಿರ್ಮಲಾ ಅವಟಿ ಅವರನ್ನು ಸನ್ಮಾನಿಸಲಾಯಿತು. ವಿಜಯಪುರ ನಗರದ ಹೊರವಲಯ ಬುರಣಾಪುರ ರಸ್ತೆಯ ಹಿಂದುಳಿದ ಪ್ರದೇಶವಾದ ಮಹಾತ್ಮಗಾಂಧಿ ನಗರ ಆಶ್ರಯ ಕಾಲೋನಿಯಲ್ಲಿ ಕಳೆದ ಹನ್ನೆರಡು ವರ್ಷಗಳಿಂದ ಬಡ, ಕೂಲಿ ಕಾರ್ಮಿಕರ, ಹಿಂದುಳಿದ ವರ್ಗ, ಅಲ್ಪಸಂಖ್ಯಾತರ ಮಕ್ಕಳ ಶೈಕ್ಷಣಿಕ. ಸರ್ವಾಂಗೀಣ ಏಳಿಗೆಗಾಗಿ ಸದ್ದಿಲ್ಲದೆ ಸೇವೆ ಸಲ್ಲಿಸುತ್ತಿರುವದನ್ನು ಗಮನಿಸಿ ಮೇ ಸಾಹಿತ್ಯ ಬಳಗ, ದಲಿತ, ಪ್ರಗತಿಪರ ಸಂಘಟನೆಗಳ ಸಹಯೋಗದಲ್ಲಿ ಬಿಜಾಪುರ,ಬುದ್ಧ,ಬಸವ,ಅಂಬೇಡ್ಕರ ಪುಸ್ತಕ ಮೇಳದಲ್ಲಿ ಎರಡನೇ ದಿನವಾದ ಶನಿವಾರ ಮಹಾತ್ಮ ಜ್ಯೋತಿಬಾ ಫುಲೆ ಅವರ ಜನ್ಮ ದಿನದ ಅಂಗವಾಗಿ ಭಾರತದ ಮೊದಲ ಅಲ್ಪ ಸಂಖ್ಯಾತ ಶಿಕ್ಷಕಿ ಫಾತಿಮಾ ಶೇಖ್, ನಾಡಿನ ಹಿರಿಯ ಸಾಹಿತಿಗಳಾದ ಶ0.ಗು.ಬಿರಾದಾರ, ಸಿ.ಸು.ಸಂಗಮೇಶ ವೇದಿಕೆಯಲ್ಲಿ ಹಮ್ಮಿಕೊಂಡ ವಿಚಾರ ಸಂಕಿರಣ, ಶಿಕ್ಷಕ ದಂಪತಿಗಳ ಸನ್ಮಾನ ಸಮಾರಂಭದಲ್ಲಿ ಶಾಲು ಹೊದಿಸಿ, ಪ್ರಮಾಣ ಪತ್ರ ವಿತರಿಸಿ, ಫಲಪುಷ್ಪ ನೀಡಿ ಗೌರವಿಸಿದರು.

ಈ ಸಂಧರ್ಭದಲ್ಲಿ ಕಾರ್ಯಕ್ರಮ



ಆಯೋಜಕ ಪ್ರಗತಿಪರ ಚಿಂತಕ ಬಸವರಾಜ ಸೂಳೇಬಾವಿ, ಅನಿಲ ಹೊಸಮನಿ, ಡಾ. ಎಚ್.ಟಿ.ಪೋತೆ, ಶಾಮರಾವ್ ಘಾಟಗೆ, ಚಿದಾನಂದ ಕಾಂಬಳೆ, ಡಿ.ಎಲ್.ಚವ್ಹಾಣ, ಅರ್ಜನ ಲಮಾಣಿ, ಸುರೇಖಾ ರಜಪೂತ, ಸಿದ್ದಪ್ಪ ಹೊಸಮನಿ ಬಿರಾದಾರ, ಸತ್ಯಪ್ಪ ಛಲವಾದಿ. ಸುರೇಶ ಘೋಣಸಗಿ, ನ್ಯಾಯವಾದಿ ಕೆ.ಎಂ. ಕೂಡಲಗಿ, ಸಿದ್ದನಗೌಡ ಪಾಟೀಲ, ಬಸವರಾಜ ತಾಳಿಕೋಟಿ, ಶಬ್ಬೀರ್ ಕಾಗಜಕೋಟೆ, ಸಾಹೇಬಗೌಡ ಪಾಟೀಲ, ಸುರೇಶ ಬಿಜಾಪುರ, ರವಿ ಕಿತ್ತೂರು, ಸರೋಜ್ ಮೇಟಿ, ಡಾ. ಸದಾಶಿವ ಪವಾರ, ಹೊನಮಲ್ಲ ಸಾರವಾಡ, ರಾಜಕುಮಾರ ಜೊಲ್ಲೆ, ವಿನೋದ ಖೇಡ, ಸಿ.ಆರ್. ತೊರವಿ, ಎಸ್. ಎಂ.ಡೋಣಿ, ನಾಗೇಶ ಗಾಯಕವಾಡ, ಆಶಾ ಕಟ್ಟಿಮನಿ, ನೀಲಾಂಬಿಕಾ ಬಿರಾದಾರ, ಸಂಗೀತಾ ಪೂಜಾರಿ, ರಶ್ಮಿ ಗುಣಕಿ, ವಿಜಯಶ್ರೀ ಬಿಜಾಪುರ, ಚೆನ್ನು ಕಟ್ಟಿಮನಿ, ಸಂಘರ್ಷ ಹೊಸಮನಿ ಮುಂತಾದವರು ಇದ್ದರು.

# ಮಕ್ಕಳ ಸರಳ ಕಲಿಕೆಗೆ ದ್ವಿಭಾಷಾ ಮಾಧ್ಯಮ ಅಗತ್ಯ:ಎಸ್.ಆರ್. ನಡುಗಡ್ಡಿ

**ಬೆಳಗಾವಿ ವಾರ್ತೆ ವಿಜಯಪುರ:** ದ್ವಿಭಾಷಾ ಮಾಧ್ಯಮವು 2026–27 ನೇ ಶೈಕ್ಷಣಿಕ ವರ್ಷದಿಂದ 1 ರಿಂದ 5 ನೇ ವರ್ಗದ ವಿಷಯಗಳನ್ನು ಮಾತೃಭಾಷೆ ಮತ್ತು ಇಂಗ್ಲಿಷ್ ನಲ್ಲಿ ಬೋಧಿಸಲು ಬಳಸುವ ಶಿಕ್ಷಣ ಪದ್ಧತಿಯಾಗಿದ್ದು, ಇದು ಜಾಗತಿಕ ಸ್ಪರ್ಧೆಗೆ ಮಕ್ಕಳನ್ನು ಸಿದ್ಧಗೊಳಿಸುತ್ತದೆ ಎಂದು ಕ್ಷೇತ್ರ ಸಮನ್ವಯಾಧಿಕಾರಿ ಎಸ್.ಆರ್. ನಡುಗಡ್ಡಿ ಹೇಳಿದರು.

ಶನಿವಾರ ಇಂಡಿ ಪಟ್ಟಣದ ಆದರ್ಶ ವಿದ್ಯಾಲಯದಲ್ಲಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ವಿಜಯಪುರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ ಇಂಡಿ ಇವರ ಸಹಯೋಗದಲ್ಲಿ ಜರುಗಿದ

1–5 ನೇ ವರ್ಗದ ಶಿಕ್ಷಕರ ದ್ವಿಭಾಷಾ ತರಬೇತಿಯ 2ನೇ ಹಂತದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ದ್ವಿಭಾಷಾ ಮಾಧ್ಯಮವು ವಿದ್ಯಾರ್ಥಿಗಳ ಬೌದ್ಧಿಕ ಬೆಳವಣಿಗೆಗೆ, ವಿಷಯದ ಆಳವಾದ ತಿಳುವಳಿಕೆಗೆ ಮತ್ತು ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಅತ್ಯಗತ್ಯ. ಇದು ಶಿಕ್ಷಕರ–ವಿದ್ಯಾರ್ಥಿಗಳ ಸಂವಹನ ಕೌಶಲ್ಯಗಳನ್ನು ಸುಧಾರಿಸಿ ಕಲಿಕಾ ಪ್ರಕ್ರಿಯೆ ಸರಳಗೊಳಿಸುತ್ತದೆ ಎಂದು ಹೇಳಿದರು.

ಬಿ ಆರ್ ಪಿ ಅಶೋಕ ರಾಠೋಡ ಮಾತನಾಡಿ, 1ನೇ ವರ್ಗದಿಂದಲೇ ವಿದ್ಯಾರ್ಥಿಗಳಿಗೆ ಸ್ಥಳೀಯ ಸಂಪನ್ಮೂಲ ಬಳಸಿ, ಮಾತೃಭಾಷೆ ಮತ್ತು ಇಂಗ್ಲಿಷ್ ಎರಡರಲ್ಲೂ ಶಿಕ್ಷಣ ನೀಡಿ, ಅವರ ಕಲಿಕೆಯನ್ನು ಬೆಂಬಲಿಸಿ, ಜಾಗತಿಕ ಸ್ಪರ್ಧೆಗೆ ಮಕ್ಕಳನ್ನು ಸಜ್ಜುಗೊಳಿಸುವದು ಈ ದ್ವಿಭಾಷಾ ಮಾಧ್ಯಮದ ಗುರಿಯಾಗಿದೆ ಎಂದು ಹೇಳಿದರು.

ಸಂಪನ್ಮೂಲ ವ್ಯಕ್ತಿ ಸಂತೋಷ ಬಂಡೆ ಮಾತನಾಡಿ, ದ್ವಿಭಾಷಾ ಮಾಧ್ಯಮವು ವಿದ್ಯಾರ್ಥಿಗಳ ಆತ್ಮವಿಶ್ವಾಸ ಹೆಚ್ಚಿಸಿ, ಉನ್ನತ ಶಿಕ್ಷಣಕ್ಕೆ ಭದ್ರ ಬುನಾದಿ ಹಾಕುತ್ತದೆ. ಅದು ಮಾತೃ ಭಾಷೆಯ ಅಡಿಪಾಯದೊಂದಿಗೆ ಜಾಗತಿಕ ಜ್ಞಾನವನ್ನು ಪಡೆಯಲು ಒಂದು ಸಮತೋಲಿತ ಮಾರ್ಗವಾಗಿದೆ ಎಂದು ಹೇಳಿದರು.

ಬಿ ಆರ್ ಪಿ ಗಳಾದ ಆಂಜನೇಯ ಸ್ವಾಮಿ ಹೊಸಮನಿ, ರಂಗರಾವ ಕುಲಕರ್ಣಿ, ಸಿ ಆರ್ ಪಿ ಗಳಾದ ಸಂಜೀವ



ಬೋರಗಿ, ಬಿ. ಡಿ. ಚಪ್ಪರಬಂದ, ಭಾಷಾಸಾಬ ಕುಮಸಗಿ, ತಾಲೂಕ ಸಂಪನ್ಮೂಲ ವ್ಯಕ್ತಿಗಳಾಗಿ ಆರ್. ಎಲ್. ಹಜೇರಿ, ದಾದಾ ಶ್ಯಾಮನವರ, ಎಸ್.ಎ. ಮೊಮಿನ್, ಆರ್.ಎಸ್. ಸುರಗಿಹಳ್ಳಿ, ಜಟ್ಟೆಪ್ಪ ಮಾದರ, ಶಿವಾನಂದ ಡಬ್ಬಿಗಾರ, ಎಚ್.ಆರ್. ಪೂಜಾರಿ, ರಾಹುಲ್ ಭೀಮನಗರ, ಸಂಜೀವ ಗುಡಿಮನಿ, ಕವಿತಾ, ಕೆಂಪರಾಜು, ರಮೇಶ ಸೇರಿದಂತೆ ಅನೇಕ ಸಂಪನ್ಮೂಲ ವ್ಯಕ್ತಿಗಳು ಹಾಗೂ 1–5 ನೇ ವರ್ಗ ಬೋಧಿಸುವ 400ಕ್ಕೂ ಅಧಿಕ ಶಿಕ್ಷಕರು ಭಾಗವಹಿಸಿದ್ದರು.

BELAGAVI VARTE Kannada Daily morning news paper Editor, Printer, Publisher and Owned by MAHESHWARI BHIMASHI BHARAMANNAVAR, 221/1A/1A/1A MAHALINGESHWAR NAGAR, NEAR BCA HOSTEL BELAGAVI KARNATAKA 591307. Printed at RAJADHANI PRINTING PRESS, CTS NO.1720/B1, SHOP NO.2 KELKARBAG, BELAGAVI, KARNATAKA - 590001